# ತೆಂಗಿನ ಸುಧಾರಿತ ತಳಿಗಳು ಮತ್ತು ಸಂಕರಣಗಳು

ಎನ್. ಆರ್. ನಾಗರಾಜ
ವಿ. ನಿರಲ್

ಭಾ.ಕೃ.ಸಂ.ಪ. – ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
ಕಾಸರಗೋಡು – 671 124, ಕೇರಳ

ತಾಂತ್ರಿಕ ಪ್ರಕಟಣೆ ಸಂಖ್ಯೆ: 141

**ತೆಂಗಿನ ಸುಧಾರಿತ ತಳಿಗಳು ಮತ್ತು ಸಂಕರಣಗಳು**

**ಭಾ.ಕೃ.ಸಂ.ಪ. – ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ**
**ಕಾಸರಗೋಡು –** 671 124, **ಕೇರಳ**
**ದೂರವಾಣಿ:** 04994-232893/94/95, 232090
**ಫ್ಯಾಕ್ಸ್** : 04994-232322
**ಇ ಮೈಲ್** : director.cpcri@icar.gov.in, directorcpcri@gmail.com
**ಜಾಲತಾಣ** : http://www.cpcri.gov.in

***ಪ್ರಕಾಶಕರು***
**ಡಾ. ಅನಿತ ಕರುಣ್,** ನಿರ್ದೇಶಕರು
ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ
ಕಾಸರಗೋಡು – 671 124, ಕೇರಳ

***ಅನುವಾದ***
ಎನ್. ಆರ್. ನಾಗರಾಜ
ವಿ. ನಿರಲ್

***ಆಂಗ್ಲ ಭಾಷೆಯಲ್ಲಿ ಸಂಗ್ರಹಣೆ ಮತ್ತು ಸಂಪಾದನೆ***
ವಿ. ನಿರಲ್
ಬಿ. ಅಗಸ್ಟಿನ್ ಜೆರಾರ್ಡ್
ಕೆ. ಸಂಸುದೀನ್
ರೆಗಿ ಜೆ. ಥೋಮಸ್
ಜೋರ್ಜ್ ವಿ. ಥೋಮಸ್

***ಛಾಯಚಿತ್ರ***
ಕೆ. ಶ್ಯಾಮಪ್ರಸಾದ್
ಕೆ. ಅಶೋಕನ್
ಬಿ. ಅಗಸ್ಟಿನ್ ಜೆರಾರ್ಡ್

ಫೆಬ್ರವರಿ, 2019

# ತೆಂಗು

**ಪರಿಚಯ**

*ಕೋಕೊಸ್ ನ್ಯೂಸಿಫೆರ* ಎಲ್. ಎಂಬ ನಾಮಧೇಯ ಹೊಂದಿರುವ ಬಹೋಪಯೋಗಿ ತೆಂಗಿನ ಮರದಿಂದ ಮಾನವನಿಗೆ ಆಗುವ ಉಪಯೋಗಗಳು ಅಪಾರ. ಪೋಷಕಾಂಶಭರಿತ ಆಹಾರ, ದಣಿವಾರಿಸುವ ಪಾನೀಯ, ಖಾದ್ಯ ಮತ್ತು ಖಾದ್ಯವಲ್ಲದ ತೈಲ, ಇಂಧನಕ್ಕೆ ಸೌದೆ, ವಸತಿಗೆ ಮರಮಟ್ಟು ಮತ್ತು ಅನೇಕ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುವ ಗುಣಧರ್ಮಕ್ಕಾಗಿಯೇ ತೆಂಗನ್ನು 'ಕಲ್ಪ ವೃಕ್ಷ' ಎಂದು ಕರೆಯುತ್ತಾರೆ. ದೇಶದಲ್ಲಿ ಸುಮಾರು 10 ಮಿಲಿಯನ್ ಕುಟುಂಬಗಳಿಗೆ ತೆಂಗು ಜೀವನಾಧಾರದ ಮುಖ್ಯ ಎಣ್ಣೆ ಬೆಳೆಯಾಗಿದ್ದು, ಸಸ್ಯ ಮೂಲದ ಎಣ್ಣೆ ಉತ್ಪಾದನೆಯಲ್ಲಿ ತೆಂಗಿನ ಎಣ್ಣೆಯ ಕೊಡುಗೆ ಶೇ.6 ರಷ್ಟಿದೆ. ಇತ್ತೀಚಿಗಿನ ವರ್ಷಗಳಲ್ಲಿ ಆವಿಷ್ಕರಿಸಲ್ಪಟ್ಟ ವರ್ಜಿನ್ ತೆಂಗಿನ ಎಣ್ಣೆ, ಎಳನೀರು ಮತ್ತು ತೆಂಗಿನ ಹೂವಿನ ಕಲ್ಪರಸ ಆರೋಗ್ಯವರ್ಧಕವಾಗಿವೆ.

ಜಾಗತಿಕ ತೆಂಗು ಉತ್ಪಾದನೆ ವ್ಯಾಪಕವಾಗಿ ಬಹುತೇಕ ಉಷ್ಣವಲಯದ ಪ್ರದೇಶಗಳಲ್ಲಿ ಹಂಚಿಹೋಗಿದೆ. ಪ್ರಪಂಚದಾದ್ಯಂತ ಸುಮಾರು 12.47 ಮಿಲಿಯನ್ ಹೆಕ್ಟೇರಿನಷ್ಟು ಪ್ರದೇಶವನ್ನು ತೆಂಗು ಹೊಂದಿದೆಯಾದರೂ ಇಂಡೋನೇಶಿಯಾ, ಫಿಲಿಫೈನ್ಸ್ ಮತ್ತು ಭಾರತ ಈ ಮೂರು ರಾಷ್ಟ್ರಗಳು ಸುಮಾರು 9 ಮಿಲಿಯನ್ ಹೆಕ್ಟೇರ್ ಪ್ರದೇಶ, ಅಂದರೆ, ಒಟ್ಟು ಪ್ರದೇಶದ ಶೇ.75 ರಷ್ಟು ಪ್ರದೇಶವನ್ನು ಹೊಂದಿವೆ. ನಮ್ಮ ದೇಶದಲ್ಲಿ ಸುಮಾರು 1.97 ಮಿಲಿಯನ್ ಹೆಕ್ಟೇರಿನಲ್ಲಿ ತೆಂಗನ್ನು ಬೆಳೆಯಲಾಗುತ್ತಿದ್ದು ಸರಾಸರಿ ವಾರ್ಷಿಕ ಉತ್ಪತ್ತಿ 20439 ಮಿಲಿಯನ್ ಕಾಯಿಗಳು ಮತ್ತು ಉತ್ಪಾದಕತೆ ಪ್ರತಿ ಹೆಕ್ಟೇರಿಗೆ 10345 ಕಾಯಿಗಳು (ತೆಂಗು ಅಭಿವೃದ್ಧಿ ಮಂಡಳಿ, 2014–15). ಭಾರತವು ತೆಂಗು ಪ್ರದೇಶ ವಿಸ್ತರಣೆಯಲ್ಲಿ ಪ್ರಪಂಚದ ಮೂರನೇ ಸ್ಥಾನದಲ್ಲಿದ್ದು, ಉತ್ಪಾದನೆ ಮತ್ತು ಉತ್ಪಾದಕತೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಈ ಬೆಳೆಯನ್ನು ದಕ್ಷಿಣ ಭಾರತದ ಪ್ರಮುಖ ನಾಲ್ಕು ರಾಜ್ಯಗಳಾದ ಕೇರಳ, ಕರ್ನಾಟಕ, ತಮಿಳುನಾಡು ಹಾಗು ಆಂಧ್ರ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಭಾರತದಲ್ಲಿ ತಮಿಳುನಾಡು ರಾಜ್ಯವು ವರ್ಷಕ್ಕೆ ಸರಾಸರಿ 4.94 ಮಿಲಿಯನ್ ಮೆಟ್ರಿಕ್ ಟನ್ ಕೊಬ್ಬರಿಯನ್ನು ಉತ್ಪಾದಿಸಿ ಪ್ರಥಮ ಸ್ಥಾನದಲ್ಲಿದ್ದರೆ, ನಂತರದ ಸ್ಥಾನಗಳಲ್ಲಿ ಕೇರಳ, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿದ್ದು, ಕ್ರಮವಾಗಿ ಸರಾಸರಿ 3.97, 3.79 ಹಾಗು 1.27 ಮಿಲಿಯನ್ ಮೆಟ್ರಿಕ್ ಟನ್ ಕೊಬ್ಬರಿಯನ್ನು ಉತ್ಪಾದಿಸುತ್ತವೆ.

ದೇಶದಲ್ಲಿ ಮರವೊಂದಕ್ಕೆ ಸರಾಸರಿ 63 ಕಾಯಿಗಳನ್ನು ಪಡೆಯಲಾಗುತ್ತಿದೆಯಾದರೂ, ಕೆಲವೊಂದು ತೆಂಗಿನ ಮರಗಳು ವರ್ಷವೊಂದಕ್ಕೆ 400ಕ್ಕೂ ಹೆಚ್ಚು ಕಾಯಿಗಳನ್ನು ಉತ್ಪಾದಿಸುತ್ತವೆ. ಆದ್ದರಿಂದ, ಉತ್ಪಾದಕತೆಯನ್ನು ಸುಧಾರಿಸಲು ಮತ್ತು ಕೃಷಿಕರ ಒಟ್ಟಾರೆ ಲಾಭದಾಯಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಅಧಿಕ ಇಳುವರಿ ಕೊಡುವ ತೆಂಗಿನ ತಳಿಗಳನ್ನು ಅಭಿವೃದ್ಧಿಪಡಿಸಲು ಗಮನ ಹರಿಸಲಾಯಿತು.

**ತೆಂಗಿನ ಅನುವಂಶಿಕ ಸಂಪನ್ಮೂಲಗಳು**

ತೆಂಗಿನಲ್ಲಿ ಮರಗಳನ್ನು ಮುಖ್ಯವಾಗಿ ಎರಡು ಬಗೆಯ ಮರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ, ಎತ್ತರವಾಗಿ ಬೆಳೆಯುವ ಮರಗಳು ಹಾಗು ಗಿಡ್ಡವಾಗಿ ಬೆಳೆಯುವ ಮರಗಳು. ಮರದ

ಗುಣಧರ್ಮಗಳನ್ನು ಅನುಸರಿಸಿ, ವಾಣಿಜ್ಯ ಉತ್ಪಾದನಾ ದೃಷ್ಠಿಯಿಂದ ಸಾಮಾನ್ಯವಾಗಿ ಎತ್ತರ ಮರಗಳನ್ನು ಪ್ರಪಂಚದಲ್ಲಿ ತೆಂಗು ಬೆಳೆಯುವ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಗಿಡ್ಡ ಮರಗಳು ತನ್ನ ಗಿಡ್ಡ ಗಾತ್ರ ಮತ್ತು ಶೀಘ್ರವಾಗಿ ಫಲ ಬರುವ ಸ್ವಭಾವದ ವೈಶಿಷ್ಟ್ಯವನ್ನು ಹೊಂದಿರುವುದರಿಂದ, ಎಳನೀರಿಗೆ ಸೂಕ್ತವಾಗಿರುವುದರಿಂದ ಹಾಗೂ ಕೆಲವು ರೋಗಗಳಿಗೆ ರೋಗನಿರೋಧಕ ಶಕ್ತಿಯನ್ನು ಹೊಂದಿರುವುದರಿಂದ ಪ್ರಾಮುಖ್ಯತೆಯನ್ನು ಪಡೆದವು. ಎತ್ತರ ಮತ್ತು ಗಿಡ್ಡ ಮರಗಳ ಗುಣಲಕ್ಷಣಗಳನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

| ಗುಣಲಕ್ಷಣಗಳು | ಎತ್ತರ | ಗಿಡ್ಡ (ಕುಬ್ಜ) |
|---|---|---|
| **ಕಾಂಡದ ಸುತ್ತಳತೆ** | ಗಟ್ಟಿಮುಟ್ಟಾಗಿದ್ದು, ಕೆಳಭಾಗದಲ್ಲಿ ಬುಡವನ್ನು ಹೊಂದಿರುತ್ತವೆ | ತೆಳುವಾಗಿದ್ದು, ಕೆಳಭಾಗದಲ್ಲಿ ಬುಡವನ್ನು ಹೊಂದಿರುವುದಿಲ್ಲ |
| **ಹೂ ಆರಂಭ** | ತಡವಾಗಿ ಹೂ ಬಿಡುತ್ತವೆ (5–7 ವರ್ಷಗಳು) | ಬೇಗನೆ ಹೂ ಬಿಡುತ್ತವೆ (3–4 ವರ್ಷಗಳು) |
| **ಪರಾಗಸ್ಪರ್ಶ ಕ್ರಮ** | ಪ್ರಧಾನವಾಗಿ ಪರಕೀಯ ಪರಾಗ ಸ್ಪರ್ಶ | ಪ್ರಧಾನವಾಗಿ ಸ್ವಕೀಯ ಪರಾಗ ಸ್ಪರ್ಶ |
| **ಕಾಯಿ ಮತ್ತು ತೊಟ್ಟುಗಳ ಬಣ್ಣ** | ಸಾಮಾನ್ಯವಾಗಿ ಹಸಿರು ಮತ್ತು ಕಂದು ಮಿಶ್ರಣ | ಅಪ್ಪಟ ಹಸಿರು, ಹಳದಿ, ಕೆಂಪು ಅಥವಾ ಕಿತ್ತಳೆ ಅಥವಾ ಕಂದು |
| **ಕಾಂಡದಲ್ಲಿ ಎಲೆಗಳ ಜೋಡಣೆ** | ಅಗಲವಾಗಿರುತ್ತದೆ | ಒತ್ತೊತ್ತಾಗಿರುತ್ತದೆ |
| **ಕಾಯಿಯ ಗಾತ್ರ** | ಅತೀ ಸಣ್ಣ ಕಾಯಿಯಿಂದ ಅತೀ ದೊಡ್ಡ ಕಾಯಿಗಳು | ಸಣ್ಣ ಕಾಯಿಯಿಂದ ಮಧ್ಯಮ ಗಾತ್ರದ ಕಾಯಿಗಳು |
| **ಕಣ್ಣಿಗೆ ಕಾಣುವ ಬದಲಾವಣೆ (ಫಿನೋಟೈಪಿಕ್‌ಬದಲಾವಣೆ)**<br>**ಒಂದೇ ತಳಿಯಲ್ಲಿ**<br>**ತಳಿಗಳ ನಡುವೆ** | <br><br>ಹೆಚ್ಚು<br>ಹೆಚ್ಚು | <br><br>ಕಡಿಮೆ<br>ಹೆಚ್ಚು |
| **ಎಲೆ ಮತ್ತು ಗೊನೆಯ ಜೋಡಣೆ** | ಹೆಚ್ಚು ದೃಢ | ದುರ್ಬಲ |
| **ಬೇರಿನ ಹರಡುವಿಕೆ (ಬೆಳವಣಿಗೆ)** | ಒತ್ತೊತ್ತಾಗಿ ಅತೀ ಹೆಚ್ಚು ಬೇರುಗಳನ್ನು ಹೊಂದಿರುತ್ತದೆ | ವಿರಳವಾಗಿ ಕಡಿಮೆ ಸಂಖ್ಯೆಯ ಬೇರುಗಳನ್ನು ಹೊಂದಿರುತ್ತದೆ |
| **ಸರಾಸರಿ ಇಳುವರಿ ಕೊಡುವ ಅವಧಿ** | ಸುಮಾರು 60 ವರ್ಷಗಳು | ಸುಮಾರು 40 ವರ್ಷಗಳು |

ಅನುವಂಶಿಕ ವೈವಿಧ್ಯತೆಯ ಸಂಗ್ರಹಣೆ, ಪಾಲನೆ, ನಿರ್ವಹಣೆ, ಮೌಲೀಕರಣ ಮತ್ತು ಅನುವಂಶಿಕ ವೈವಿಧ್ಯತೆಯನ್ನು ಉಪಯೋಗಮಾಡಿಕೊಳ್ಳುವುದು ತಳಿ ಅಭಿವೃದ್ಧಿಗೆ ಅಗತ್ಯವಾಗಿರುತ್ತದೆ.

ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿ.ಪಿ.ಸಿ.ಆರ್.ಐ.)ಯು ಪ್ರಮುಖ ರಾಷ್ಟ್ರೀಯ ಸಂಸ್ಥೆಯಾಗಿದ್ದು ತೆಂಗು ಸಂಶೋಧನೆಯನ್ನು ನಿರ್ವಹಿಸುತ್ತಿದೆ ಮತ್ತು ಜಗತ್ತಿನ ಅತಿ ದೊಡ್ಡ ತೆಂಗು ವಂಶವಾಹಿನಿಗಳ ಸಂಗ್ರಹಣಾ ಭಂಡಾರವಾಗಿದೆ ಹಾಗು ಭಾ.ಕೃ.ಸಂ.ಪ.–ರಾಷ್ಟ್ರೀಯ ಸಸ್ಯ ಅನುವಂಶಿಕ ಸಂಪನ್ಮೂಲಗಳ ಸಂಗ್ರಹಣಾ ಸಂಸ್ಥೆ (ಎನ್.ಬಿ.ಪಿ.ಜಿ.ಆರ್)ಯು ಸಿ.ಪಿ.ಸಿ.ಆರ್.ಐ.ಯನ್ನು ರಾಷ್ಟ್ರೀಯ ಸಕ್ರಿಯ ತೆಂಗಿನ ವಂಶವಾಹಿನಿಗಳ ಸಂಗ್ರಹಣಾ ಕೇಂದ್ರ ಎಂದು ಗೊತ್ತುಪಡಿಸಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನ ತೆಂಗಿನ ವಂಶವಾಹಿನಿಗಳ ಸಂಗ್ರಹಣೆಯಲ್ಲಿ ಸುಮಾರು 433 ವಂಶವಾಹಿನಿಗಳಿವೆ. ಇವುಗಳಲ್ಲಿ 132 ವಿದೇಶೀ ಮೂಲಗಳಿಂದ ಮತ್ತು 301 ದೇಶೀಯ ಮೂಲಗಳಿಂದ ಸಂಗ್ರಹಿಸಿದ ವಂಶವಾಹಿನಿಗಳಾಗಿವೆ. ಇದಕ್ಕೆ ಪೂರಕವಾಗಿ ದಕ್ಷಿಣ ಏಷಿಯಾದ ಅಂತರರಾಷ್ಟ್ರೀಯ ತೆಂಗು ವಂಶವಾಹಿನಿಗಳ ಬ್ಯಾಂಕ್ ಅನ್ನು ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನ ಸಂಶೋಧನಾ ಕೇಂದ್ರ ಕಿದು, ಕರ್ನಾಟಕದಲ್ಲಿ ಸ್ಥಾಪಿಸಲಾಗಿದೆ. ತೆಂಗಿನ ವಂಶವಾಹಿನಿಗಳನ್ನು ತೆಂಗಿನ ತಳಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಂಡು ಆಯ್ಕೆ ಮತ್ತು ಸಂಕರೀಕರಣದ ಮೂಲಕ ವಿವಿಧ ತೆಂಗು ಬೆಳೆಯುವ ಪ್ರದೇಶಗಳಿಗೆ ಸೂಕ್ತ ತಳಿಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ನಿಟ್ಟಿನಲ್ಲಿ ಈಗಾಗಲೇ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. ಸಂಸ್ಥೆಯು 15 ಸಂಕರಣ ತಳಿಗಳು ಮತ್ತು 27 ತಳಿಗಳನ್ನು ಅಭಿವೃದ್ಧಿಪಡಿಸಿ ನಮ್ಮ ರಾಷ್ಟ್ರದ ಬೇರೆ ಬೇರೆ ಪ್ರದೇಶಗಳಿಗೆ ಮತ್ತು ರಾಜ್ಯಗಳಿಗೆ ವಾಣಿಜ್ಯ ಬೆಳೆಗಾಗಿ ಬಿಡುಗಡೆಗೊಳಿಸಲಾಗಿದೆ.

## ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನ ತೆಂಗಿನ ತಳಿಗಳು

ತೆಂಗು ಬೆಳೆಗಾರರು, ವಿಸ್ತರಣಾ ಅಧಿಕಾರಿಗಳು, ನರ್ಸರಿ ಮಾಡುವವರು ಮತ್ತು ಸಂಶೋಧನೆಯಲ್ಲಿ ತೊಡಗಿಕೊಂಡಿರುವವರು ತೆಂಗಿನ ತಳಿಗಳನ್ನು ಪ್ರಾಯೋಗಿಕವಾಗಿ ಗುರುತಿಸುವುದು ಬಹಳ ಮುಖ್ಯ. ಆದುದರಿಂದ ತೆಂಗಿನ ತಳಿಗಳನ್ನು ಪರಿಚಯಮಾಡಿಕೊಡಲು ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ಅಭಿವೃದ್ಧಿಪಡಿಸಿ ವಾಣಿಜ್ಯ ಕೃಷಿಗಾಗಿ ಶಿಫಾರಸು ಮಾಡಿರುವ ತೆಂಗಿನ ತಳಿಗಳ ಗುಣಲಕ್ಷಣಗಳನ್ನು ಈ ತಾಂತ್ರಿಕ ಪುರವಣೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ಯು ಆಯ್ಕೆ ಮೂಲಕ ಅಭಿವೃದ್ಧಿಪಡಿಸಿ ವಾಣಿಜ್ಯ ಕೃಷಿಗಾಗಿ ಬಿಡುಗಡೆಗೊಳಿಸಿರುವ ತಳಿಗಳಲ್ಲಿ ಚೌಘಾಟ್ ಕಿತ್ತಳೆ ಗಿಡ್ಡ, ಕಲ್ಪ ಸೂರ್ಯ ಮತ್ತು ಕಲ್ಪ ಜ್ಯೋತಿ ತಳಿಗಳನ್ನು ವಿಶೇಷವಾಗಿ ಎಳ ನೀರಿಗಾಗಿ ಬಿಡುಗಡೆಗೊಳಿಸಲಾಗಿದೆ. ಕಲ್ಪರಕ್ಷ ಮತ್ತು ಕಲ್ಪಶ್ರೀ ತಳಿಗಳನ್ನು ಬೇರು ಸೊರಗು ರೋಗವಿರುವ ಪ್ರದೇಶಗಳಿಗೆ ರೋಗ ನಿರೋಧಕ ತಳಿಗಳಾಗಿ ಶಿಫಾರಸು ಮಾಡಲಾಗಿದೆ. ಕಲ್ಪ ಪ್ರತಿಭಾ, ಕೇರಚಂದ್ರ ಮತ್ತು ಕಲ್ಪ ಹರಿತ ತಳಿಗಳನ್ನು ಕೊಬ್ಬರಿ ಮತ್ತು ಎಳ ನೀರು, ಎರಡೂ ಉದ್ದೇಶಗಳಿಗೆ ಸೂಕ್ತವಾಗಿವೆಯೆಂದು ಶಿಫಾರಸು ಮಾಡಲಾಗಿದೆ. ಚೆಂಡು ಕೊಬ್ಬರಿ

ತಯಾರಿಸುವಾಗ ಕಡಿಮೆ ಕೊಬ್ಬರಿ ಹಾಳಾಗುವುದರಿಂದ ಮತ್ತು ಶೇಕಡಾವಾರು ಹೆಚ್ಚಿನ ಚೆಂಡು ಕೊಬ್ಬರಿ ದೊರೆಯುವುದರಿಂದ ವಿಶೇಷವಾಗಿ ಈ ತಳಿಯನ್ನು ಚೆಂಡು ಕೊಬ್ಬರಿ ಉತ್ಪಾದನೆಗೆ ಶಿಫಾರಸು ಮಾಡಲಾಗಿದೆ. ಚಂದ್ರ ಕಲ್ಪ, ಕಲ್ಪ ಮಿತ್ರ, ಕಲ್ಪ ಧೇನು, ಕೇರ ಕೇರಳಮ್ ಮತ್ತು ಕಲ್ಪತರು ತಳಿಗಳು ಸ್ವಲ್ಪ ಮಟ್ಟಿಗೆ ಬರಗಾಲವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿವೆಯೆಂದು ತಿಳಿಸಲಾಗಿದೆ.

## 1. ಕುಬ್ಜ / ಮಧ್ಯಮ ಎತ್ತರ ತಳಿಗಳು

### 1. 1. ಚೌಘಾಟ್ ಕಿತ್ತಳೆ ಗಿಡ್ಡ

ಚೌಘಾಟ್ ಕಿತ್ತಳೆ ಗಿಡ್ಡ ತಳಿಯನ್ನು ದೇಶದಲ್ಲಿ ಎಳನೀರಿಗಾಗಿ ಬೆಳೆಯಲು ಶಿಫಾರಸು ಮಾಡಲಾಗಿದೆ. ಈ ತಳಿಯನ್ನು ನಮ್ಮ ದೇಶದ ಪಶ್ಚಿಮ ಕರಾವಳಿಯುದ್ದಕ್ಕೂ ಅದರಲ್ಲೂ ಕೇರಳದ ತ್ರಿಸ್ಸೂರ್ ಜೆಲ್ಲೆಯ ಚವಕ್ಕಾಡ್ ಪ್ರದೇಶದಲ್ಲಿ ಅಲ್ಲಲ್ಲಿ ಬೆಳೆಯುವ ದೇಶೀಯ ಕಿತ್ತಳೆ ಗಿಡ್ಡ (IND 007) ತಳಿಯಿಂದ ಆಯ್ಕೆ ಮಾಡಿ ಅಭಿವೃದ್ಧಿಪಡಿಸಲಾಗಿದೆ. ಈ ತಳಿಯ ಮರದ ಕಾಂಡವು ತೆಳುವಾಗಿದ್ದು, ಒತ್ತೊತ್ತಾಗಿರುವ ಎಲೆಯ ಗುರುತುಗಳು, ಚಿಕ್ಕ ಚೆಂಡೆಯ ಜೊತೆಗೆ ಕಿತ್ತಳೆ ಬಣ್ಣದ ಎಲೆ ತೊಟ್ಟುಗಳು, ಹಿಂಗಾರ ಮತ್ತು ಕಾಯಿಗಳನ್ನು ಹೊಂದಿರುತ್ತದೆ. ಈ ತಳಿಯು 3 ರಿಂದ 4 ವರ್ಷಗಳಲ್ಲಿ ಹೂ ಬಿಡುತ್ತದೆ ಮತ್ತು ಹೆಚ್ಚಾಗಿ ಸ್ವಕೀಯ ಪರಾಗಸ್ಪರ್ಷವನ್ನು ಹೊಂದಿದೆ. ಈ ತಳಿಯ ಮರಗಳು ತೇವಾಂಶದ ಕೊರತೆಗೆ ಸಂವೇದನಾಶೀಲವಾಗಿರುತ್ತವೆ ಮತ್ತು ವರ್ಷ ಬಿಟ್ಟು ವರ್ಷ ಫಲವನ್ನು ಕೊಡುವ ಗುಣವನ್ನು ಹೊಂದಿವೆ. ನೀರಾವರಿ ಪ್ರದೇಶಗಳಲ್ಲಿ ಮತ್ತು ಚೆನ್ನಾಗಿ ನಿರ್ವಹಣೆಗೊಳಪಟ್ಟ ತೋಟಗಳಲ್ಲಿ ಈ ತಳಿಯಿಂದ ಅಧಿಕ ಸರಾಸರಿ 112 ಕಾಯಿಗಳ ಇಳುವರಿಯನ್ನು ಪ್ರತಿ ಮರದಿಂದ ವಾರ್ಷಿಕವಾಗಿ ಪಡೆಯಬಹುದಾಗಿದೆ. ಸಾಧಾರಣ ನಿರ್ವಹಣೆಗೊಳಪಟ್ಟ ತೋಟಗಳಲ್ಲಿ ವಾರ್ಷಿಕ ಸರಾಸರಿ ಇಳುವರಿ ಪ್ರತಿ ಮರಕ್ಕೆ ಕೇವಲ 63 ಕಾಯಿಗಳು.

ಕಾಯಿಗಳು ಚಿಕ್ಕದಾಗಿದ್ದು, ಸರಾಸರಿ 634ಗ್ರಾಂ ತೂಕವಿದ್ದು, ಪ್ರತೀ ಕಾಯಿಯು 128ಗ್ರಾಂ ಕೊಬ್ಬರಿಯನ್ನು ಹೊಂದಿದ್ದು, ಕೊಬ್ಬರಿಯಲ್ಲಿ ಎಣ್ಣೆಯಂಶ ಶೇ.66 ರಷ್ಟಿರುತ್ತದೆ. ಭಾ.ಕೃ.ಸಂ.ಪ.– ಸಿ.ಪಿ.ಸಿ.ಆರ್.ಐ., ಕಾಸರಗೋಡಿನಲ್ಲಿ ಚೌಘಾಟ್ ಕಿತ್ತಳೆ ಗಿಡ್ಡ ತಳಿಯನ್ನು 44 ವಿವಿಧ ತೆಂಗಿನ ವಂಶವಾಹಿನಿಗಳ ಜೊತೆಗೆ ತುಲನಾತ್ಮಕವಾಗಿ ಪರೀಕ್ಷಿಸಿದಾಗ ಈ ತಳಿಯ ಎಳನೀರಿನಲ್ಲಿ ಅತಿ ಹೆಚ್ಚು ಒಟ್ಟು ಸಕ್ಕರೆಯಂಶವಿರುವುದು ಕಂಡುಬಂದಿತು ಆದುದರಿಂದ ಈ ತಳಿಯನ್ನು ಭಾ.ಕೃ.ಸಂ.ಪ.– ಸಿ.ಪಿ.ಸಿ.ಆರ್.ಐ. ಎಳನೀರು ತಳಿಯಾಗಿ ಅಭಿವೃದ್ಧಿ ಪಡಿಸಿದೆ. ಏಳು ತಿಂಗಳ ಪ್ರಾಯದ ಎಳನೀರು ಸಿಹಿಯಾಗಿದ್ದು 100ಮಿ.ಲೀ. ಎಳನೀರಿನಲ್ಲಿ 7ಗ್ರಾಂ ಒಟ್ಟು ಸಕ್ಕರೆ, 20ಪಿಪಿಎಮ್ ಸೋಡಿಯಮ್, ಹಾಗು 2000ಪಿಪಿಎಮ್ ಪೊಟಾಷಿಯಂ ಇರುತ್ತದೆ. ಇಂದ್ರಿಯಗಳ ಮೇಲಿನ ಪರಿಣಾಮ ಉಂಟು

ಮಾಡುವ ಆಧಾರದ ಮೇಲೆ ನಡೆದ ಮೌಲ್ಯಮಾಪನದ ಪ್ರಕಾರ (ಆರ್ಗ್ಯಾನೋಲೆಪ್ಟಿಕ್) ಈ ಎಳನೀರನ್ನು ರುಚಿಯಲ್ಲಿ 'ತುಂಬಾ ಉತ್ತಮ' ವೆಂದು ವರ್ಗೀಕರಿಸಲಾಗಿದೆ.

ಚೌಘಾಟ್ ಕಿತ್ತಳೆ ಗಿಡ್ಡ ತಳಿಯನ್ನು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯು 1991 ರಲ್ಲಿ ನಡೆದ ತನ್ನ ಹತ್ತನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ನಮ್ಮ ದೇಶದಲ್ಲಿ ಎಳನೀರು ತಳಿಯಾಗಿ ಬೆಳೆಯಲು ಶಿಫಾರಸು ಮಾಡಿದೆ.



**ಚೌಘಾಟ್ ಕಿತ್ತಳೆ ಗಿಡ್ಡ**

## 1.2. ಕಲ್ಪಶ್ರೀ

ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯ ಕಾಯಂಕುಲಂನ ಪ್ರಾಂತೀಯ ಕ್ಷೇತ್ರವು, ದೇಶೀಯ ಕುಬ್ಜ ತಳಿಯಾದ ಚೌಘಾಟ್ ಹಸಿರು ಗಿಡ್ಡ ತಳಿಯಿಂದ ಆಯ್ಕೆ ಮಾಡಿ, ಬೇರು ಸೊರಗು ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿರುವ ಮತ್ತು ಅಧಿಕ ಇಳುವರಿಯನ್ನು ಕೊಡಬಲ್ಲ ಸಾಮರ್ಥ್ಯವನ್ನು ಹೊಂದಿರುವ, ಬೇರು ಸೊರಗು ರೋಗವಿರುವ ಪ್ರದೇಶಗಳಲ್ಲಿ ಬೆಳೆಯಲು ಕಲ್ಪಶ್ರೀ ತಳಿಯನ್ನು ಅಭಿವೃದ್ಧಿಪಡಿಸಿದೆ. ಈ ತಳಿಯು ಬೇಗನೆ ಹೂ ಬಿಡುವುದಾಗಿದ್ದು 2.5 ರಿಂದ 3 ವರ್ಷಗಳಲ್ಲಿ ಹೂ ಬಿಡುತ್ತದೆ. ಈ ತಳಿಯ ಎಲೆ ತೊಟ್ಟುಗಳು, ಎಲೆಗಳು ಮತ್ತು ಕಾಯಿಗಳು ಕಡು ಹಸಿರು ಬಣ್ಣವನ್ನು ಹೊಂದಿರುತ್ತವೆ. ಕಾಯಿಗಳು ಉದ್ದನೆಯ ಆಕಾರವನ್ನು ಹೊಂದಿದ್ದು ಸಂಪೂರ್ಣ ಬೆಳೆದ ಕಾಯಿಯು ವಿಶಿಷ್ಟ ಕೊಕ್ಕನ್ನು ಹೊಂದಿರುತ್ತದೆ. ಈ ತಳಿಯು ಉತ್ಕೃಷ್ಟ ಗುಣಮಟ್ಟದ ತೆಂಗಿನ ಎಣ್ಣೆ, ತುಂಬಾ ಸಿಹಿಯಾಗಿರುವ ಎಳನೀರು ಮತ್ತು ಕಾಯಿಯನ್ನು ಹೊಂದಿರುವುದಲ್ಲದೆ ಬೇರು ಸೊರಗು ರೋಗಕ್ಕೆ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಈ ತಳಿಯ ಮರವು 20 ವರ್ಷಗಳಲ್ಲಿ ಸುಮಾರು 4 ಮೀಟರ್ ಎತ್ತರ ಬೆಳೆಯುತ್ತದೆ. ಈ ತಳಿಯು ತುಂಬಾ ಸಿಹಿಯಾದ 240ಮಿ.ಲೀ. ಎಳನೀರನ್ನು ಹೊಂದಿರುವುದರಿಂದ ಈ ತಳಿಯನ್ನು ಎಳನೀರಿಗಾಗಿ ಬೆಳೆಯಬಹುದಾಗಿದೆ. ಕಲ್ಪಶ್ರೀ ತಳಿಯ 100ಮಿ.ಲೀ. ಎಳನೀರಿನಲ್ಲಿ 4.8ಗ್ರಾಂ ಒಟ್ಟು ಸಕ್ಕರೆ, 2150ಪಿಪಿಎಮ್ ಪೊಟಾಷಿಯಮ್,

22.4ಪಿಪಿಎಮ್ ಸೋಡಿಯಮ್ ಇರುತ್ತದೆ. ಈ ತಳಿಯ ಎಣ್ಣೆಯು ಹೆಚ್ಚಾಗಿ ಉದ್ದ ಸರಪಳಿ ಅಪರ್ಯಾಪ್ತ ಮೇದಾಮ್ಲಗಳನ್ನು ಹೊಂದಿದ್ದು ಪಶ್ಚಿಮ ಕರಾವಳಿ ಎತ್ತರ ಮತ್ತು ಚೌಘಾಟ್ ಕಿತ್ತಳೆ ಗಿಡ್ಡ ತಳಿಗಳ ಎಣ್ಣೆಗಳಿಗಿಂತ ಆರೋಗ್ಯಕರವಾಗಿದೆ. ಎಲ್ಲಾ ಕಾಲಗಳಲ್ಲಿ ಕಲ್ಪಶ್ರೀ ತಳಿಯ ಎಣ್ಣೆಯು ಪಶ್ಚಿಮ ಕರಾವಳಿ ಎತ್ತರ ಮತ್ತು ಚೌಘಾಟ್ ಕಿತ್ತಳೆ ಗಿಡ್ಡ ತಳಿಗಳಿಗಿಂತ ಕ್ರಮವಾಗಿ ಶೇ. 25-40 ಹೆಚ್ಚು ಅತ್ಯಗತ್ಯ ಕೊಬ್ಬಿ ನಾಮ್ಲಗಳನ್ನು ಹೊಂದಿದೆ. ಇದಲ್ಲದೆ, ಈ ತಳಿಯ ಎಣ್ಣೆಯು ಅತಿಹೆಚ್ಚು ಅತ್ಯಗತ್ಯ ಕೊಬ್ಬಿ ನಾಮ್ಲವಾದ ಲಿನೋಲಿಯಿಕ್ ಆಮ್ಲವನ್ನು ಹೊಂದಿದೆ. ಆದರೆ, ಈ ತಳಿಯು ಜೈವಿಕ ಒತ್ತಡಗಳಿಗೆ ಹೆಚ್ಚಾಗಿ ತುತ್ತಾಗುವುದರಿಂದ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಕೃಷಿಗಾಗಿ ಈ ತಳಿಯನ್ನು ಬೆಳೆದಾಗ ತಪ್ಪದೆ ಮುಖ್ಯ ಕೀಟಗಳ ನಿರ್ವಹಣಾ ಪದ್ದತಿಗಳನ್ನು ಅದರಲ್ಲೂ ಕೆಂಪು ಮೂತಿ ಹುಳು ಸಮಗ್ರ ನಿಯಂತ್ರಣ ಕ್ರಮಗಳನ್ನು ಅನುಸರಿಸುವುದು ಅತಿಅಗತ್ಯ.

ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯ ಕಾಯಂಕುಲಂನ ಪ್ರಾಂತೀಯ ಕ್ಷೇತ್ರ ಮತ್ತು ಬೇರು ಸೊರಗು ರೋಗ ಹೆಚ್ಚಿರುವ ಪ್ರದೇಶಗಳ ಹಲವು ರೈತರ ತೋಟಗಳಲ್ಲಿ ಈ ತಳಿಯು ತೋರಿದ ಉತ್ಕೃಷ್ಟ ಪ್ರದರ್ಶನದಿಂದಾಗಿ ಈ ತಳಿಯನ್ನು ಬೇರು ಸೊರಗು ರೋಗಕ್ಕೆ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ ಎಂದು ಶಿಫಾರಸು ಮಾಡಲಾಗಿದೆ. ಈ ತಳಿಯನ್ನು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯು 2009ರಲ್ಲಿ ನಡೆದ ತನ್ನ ಹತ್ತೊಂಬತ್ತನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ದೇಶದ ಬೇರು ಸೊರಗು ರೋಗವಿರುವ ಪ್ರದೇಶಗಳಿಗೆ ಶಿಫಾರಸು ಮಾಡಿ ಬಿಡುಗಡೆಮಾಡಲಾಗಿದೆ. ಕೇಂದ್ರ ಬೆಳೆಗಳ ಗುಣಮಟ್ಟದ ಉಪಸಮಿತಿ, ಅಧಿಸೂಚನೆ ಹಾಗು ತಳಿ ಬಿಡುಗಡೆ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ) ವು ಅಧಿಸೂಚನೆ ನಂಬ್ರ ಎಸ್.ಒ. 456 (ಇ), ದಿನಾಂಕ 16 ಮಾರ್ಚ್, 2012 ರಲ್ಲಿ ತಿಳಿಸಿದೆ.



**ಕಲ್ಪಶ್ರೀ**

### 1.3. ಕಲ್ಪ ಜ್ಯೋತಿ

ಕಲ್ಪ ಜ್ಯೋತಿ ತಳಿಯನ್ನು ಮಲೇಶಿಯಾದಿಂದ 1961ರಲ್ಲಿ ಸ್ವಾಧೀನಪಡಿಸಿಕೊಂಡು ಪರಿಚಯಿಸಲಾದ ಮಲಯನ್ ಹಳದಿ ಗಿಡ್ಡ (IND 058) ದಿಂದ ಅಭಿವೃದ್ಧಿಪಡಿಸಲಾಗಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನಲ್ಲಿ ಉತ್ತಮ ಅಧಿಕ ಇಳುವರಿ ಕೊಡುವ ಮರಗಳನ್ನು ಆಯ್ಕೆ ಮಾಡಿ ಮತ್ತು ಆಯ್ಕೆ ಮಾಡಿದ ಮರಗಳೊಳಗೆ ಪರಾಗಸ್ಪರ್ಷಮಾಡಿ ಈ ತಳಿಯ ಸಮೂಹವನ್ನು ಅಭಿವೃದ್ಧಿಪಡಿಸಲಾಗಿದೆ. ಕಾಸರಗೋಡಿನ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನಲ್ಲಿ ಮೌಲ್ಯಮಾಪನ ಮಾಡಿದಾಗ ಚೌಘಾಟ್ ಕಿತ್ತಳೆ ಗಿಡ್ಡ ತಳಿಗಿಂತ ಈ ತಳಿಯು ಅಧಿಕ ಇಳುವರಿಯನ್ನು ಕೊಡಬಲ್ಲದೆಂದು ತಿಳಿದುಬಂದಿದೆ. ಇದಲ್ಲದೆ, ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಸಂಶೋಧನ ಕೇಂದ್ರ, ಕಿದು ಮತ್ತು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರಗಳಾದ ಕರ್ನಾಟಕ ಮತ್ತು ಅಸ್ಸಾಂ ರಾಜ್ಯಗಳಲ್ಲಿಯೂ ಉತ್ತಮ ಪ್ರದರ್ಶನ ತೋರಿರುವುದು ಕಂಡುಬಂದಿದೆ. ಈ ತಳಿಯು ಪ್ರತೀ ಮರಕ್ಕೆ ವರ್ಷವೊಂದರಲ್ಲಿ ಸರಾಸರಿ 114 ಕಾಯಿಗಳನ್ನು ಕೊಡುತ್ತಿದ್ದು, 171 ಕಾಯಿಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದ್ದು ಎಳನೀರಿನ ಬೇಡಿಕೆಯನ್ನು ಈಡೇರಿಸಿಕೊಳ್ಳಬಹುದಾಗಿದೆ. ಪ್ರತೀ ಮರದಿಂದ ವಾರ್ಷಿಕ ಕಾಯಿಗಳ ಇಳುವರಿ ಮತ್ತು ಕೊಬ್ಬರಿ ಇಳುವರಿ ಎರಡರಲ್ಲೂ ಸ್ಥಳೀಯ ಚೌಘಾಟ್ ಕಿತ್ತಳೆ ಗಿಡ್ಡ ತಳಿಗಿಂತ ಹೆಚ್ಚು ಇಳುವರಿಯನ್ನು ನೀಡುತ್ತದೆಯೆಂದು ತಿಳಿದುಬಂದಿದೆ. ಮಳೆಯಾಧಾರಿತ ಪರಿಸ್ಥಿತಿಯಲ್ಲಿ ಕಾಸರಗೋಡಿನಲ್ಲಿ ಈ ತಳಿಯು ಚೌಘಾಟ್ ಕಿತ್ತಳೆ ಗಿಡ್ಡ ತಳಿಗಿಂತ ಹೇಕ್ಟೇರಿಗೆ ಕ್ರಮವಾಗಿ ಶೇ. 114 ಮತ್ತು ಶೇ. 123, ಹೆಚ್ಚು ಕಾಯಿ ಮತ್ತು ಕೊಬ್ಬರಿ ಇಳುವರಿಯನ್ನು ಕೊಡುತ್ತದೆ. ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ತೋರಿದ ಉತ್ತಮ ಪ್ರದರ್ಶನದಿಂದಾಗಿ ಈ ತಳಿಯನ್ನು ಕುಬ್ಜ ತಳಿಯಾಗಿ ಬೆಳೆಯಲು ಕೇರಳ, ಕರ್ನಾಟಕ ಮತ್ತು ಅಸ್ಸಾಂ ರಾಜ್ಯಗಳ ತೆಂಗು ಬೆಳೆಯುವ ಪ್ರದೇಶಗಳಿಗೆ ಶಿಫಾರಸು ಮಾಡಲಾಗಿದೆ.

ಈ ತಳಿಯ ಮರಗಳು ಗಿಡ್ಡವಾಗಿದ್ದು ದಟ್ಟವಾದ ಗೋಲಾಕಾರದ ಚೆಂಡೆ ಮತ್ತು ಜೋತುಬಿದ್ದಿರುವ ಎಲೆಯ ತುದಿಯನ್ನು ಹೊಂದಿರುತ್ತವೆ. ಕಾಯಿಗಳು ಮಧ್ಯಮ ಗಾತ್ರದಲ್ಲಿ, ಅಂಡಾಕಾರದಲ್ಲಿದ್ದು ಹಳದಿ ಬಣ್ಣವನ್ನು ಹೊಂದಿರುತ್ತವೆ. ಈ ತಳಿಯು ಉತ್ತಮ ರುಚಿಯ ಸುಮಾರು 380ಮಿ.ಲೀ. ಎಳನೀರನ್ನು ಹೊಂದಿದೆ. ಕಲ್ಪ ಜ್ಯೋತಿ ತಳಿಯ 100ಮಿ.ಲೀ. ಎಳನೀರಿನಲ್ಲಿ 6.2ಗ್ರಾಂ ಒಟ್ಟು ಸಕ್ಕರೆ, 1.7ಮಿ.ಗ್ರಾಂ ಮುಕ್ತ ಅಮಿನೋ ಆಮ್ಲಗಳಲ್ಲದೆ, 36ಪಿಪಿಎಮ್ ಸೋಡಿಯಮ್ ಮತ್ತು 1998ಪಿಪಿಎಮ್ ಪೊಟಾಷಿಯಮ್ ಇರುವುದು ತಿಳಿದುಬಂದಿದೆ. ಕಲ್ಪ ಜ್ಯೋತಿ ತಳಿಯ ಕಾಯಿಯ ಸರಾಸರಿ ತೂಕ 649ಗ್ರಾಂ. ಇದ್ದು, ಕಾಯೊಂದಕ್ಕೆ 142.42ಗ್ರಾಂ ಕೊಬ್ಬರಿ ಮತ್ತು ಕೊಬ್ಬರಿಯಲ್ಲಿ ಶೇ. 61.5ರಷ್ಟು ಎಣ್ಣೆ ಅಂಶವಿರುತ್ತದೆ. ಈ ತಳಿಯ ಮರಗಳು ನೆಟ್ಟು 38 ತಿಂಗಳುಗಳ ನಂತರ ಹೂ ಬಿಡಲು

ಪ್ರಾರಂಭಿಸುತ್ತವೆ. ಆದರೆ, ಶೇ. 50 ಮರಗಳು ಹೂ ಬಿಡಲು ಸರಾಸರಿ 51 ತಿಂಗಳುಗಳನ್ನು ತೆಗೆದುಕೊಳ್ಳುತ್ತವೆ. ಯಾವುದೇ ಪ್ರಮುಖ ಕೀಟ ಮತ್ತು ರೋಗಗಳ ಹಾವಳಿ ಈ ತಳಿಯಲ್ಲಿ ಕಂಡುಬಂದಿಲ್ಲ. ಆದರೆ, ಈ ತಳಿಯ ಮರಗಳು ಕುರುವಾಯಿ ದುಂಬಿ ಮತ್ತು ಕೆಂಪು ಮೂತಿ ದುಂಬಿಗಳ ಹಾವಳಿಗೆ ತುತ್ತಾಗುತ್ತವೆ ಮತ್ತು ಸ್ವಲ್ಪ ಮಟ್ಟಿಗೆ ನುಸಿ ಕೀಟ ಮತ್ತು ಸುಳಿ ಕೊಳೆ ರೋಗಕ್ಕೂ ಈಡಾಗುತ್ತವೆ. ಸಾಮಾನ್ಯವಾಗಿ ಕುಬ್ಜ ತಳಿಗಳು ನೀರಿನ ಕೊರತೆಯನ್ನು ತಡೆದುಕೊಳ್ಳುವ ಗುಣವನ್ನು ಹೊಂದಿಲ್ಲವಾದ್ದರಿಂದ ಈ ತಳಿಗಳನ್ನು ಸಾಕಷ್ಟು ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿ ಬೆಳೆಯಲು ಶಿಫಾರಸು ಮಾಡಲಾಗಿದೆ. ಆದರೆ, ಕಲ್ಪ ಜ್ಯೋತಿ ತಳಿಯು ನೀರಿನ ಕೊರತೆಯನ್ನು ತಡೆದುಕೊಳ್ಳುವ ಗುಣವನ್ನು ಹೊಂದಿದೆಯೆಂದು ಮೌಲ್ಯಮಾಪನದ ಮೂಲಕ ಕಂಡುಕೊಳ್ಳಲಾಗಿದೆ.

ಈ ತಳಿಯ ಉತ್ಕೃಷ್ಟ ಇಳುವರಿ ಮತ್ತು ಎಳನೀರಿನ ಗುಣಮಟ್ಟವನ್ನು ಪರಿಗಣಿಸಿ 2012ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಇಪ್ಪತ್ತೊಂದನೆಯ ಗುಂಪು ಸಭೆಯಲ್ಲಿ ಈ ತಳಿಯನ್ನು ಎಳನೀರು ತಳಿಯಾಗಿ ವಾಣಿಜ್ಯ ಬೆಳೆಗಾಗಿ ಶಿಫಾರಸು ಮಾಡಲಾಗಿದೆ. ಈ ತಳಿಯು ಅಧಿಕ ಇಳುವರಿ ಕೊಡುವ ಕುಬ್ಜ ತಳಿಯಾಗಿದ್ದು ದೇಶದಲ್ಲಿ ತೆಂಗಿನ ಉತ್ಪಾದಕತೆಯನ್ನು ಹೆಚ್ಚಿಸಲು ಸಹಕಾರಿಯಾಗಲಿದೆ. ಇದಲ್ಲದೆ, ಈ ತಳಿಯ ಕಾಯಿಗಳ ಹಳದಿ ಬಣ್ಣ ಕಲಾತ್ಮಕವಾಗಿ ಅತ್ಯಂತ ಆಕರ್ಷಕವಾಗಿರುವುದರಿಂದ ಒಣಗಿದ ಕಾಯಿಗಳು ಮತ್ತು ಗರಿಗಳು ಪಾದಚಾರಿಗಳ ಮೇಲೆ ಬೀಳದಂತೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿ ಈ ತಳಿಯ ಮರಗಳನ್ನು ವಿಶಾಲ ದಾರಿಗಳಲ್ಲಿಯೂ ನೆಡಬಹುದಾಗಿದೆ.



**ಕಲ್ಪ ಜ್ಯೋತಿ ತಳಿಯ ಕಾಯಿಗಳ ಗೊಂಚಲು**



**ಕಲ್ಪ ಜ್ಯೋತಿ**

## 1.4. ಕಲ್ಪ ಸೂರ್ಯ

ಕಲ್ಪ ಸೂರ್ಯ ತಳಿಯನ್ನು ಮಲೇಶಿಯಾದಿಂದ 1959ರಲ್ಲಿ ಸ್ವಾಧೀನಪಡಿಸಿಕೊಂಡು ಪರಿಚಯಿಸಲಾದ ಮಲಯನ್ ಕಿತ್ತಳೆ ಗಿಡ್ಡ (EC 548007) ದಿಂದ ಅಭಿವೃದ್ಧಿಪಡಿಸಲಾಗಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನಲ್ಲಿ ಉತ್ತಮ ಅಧಿಕ ಇಳುವರಿ ಕೊಡುವ ಮರಗಳನ್ನು ಆಯ್ಕೆ ಮಾಡಿ ಮತ್ತು ಆಯ್ಕೆ ಮಾಡಿದ ಮರಗಳೊಳಗೆ ಪರಾಗಸ್ಪರ್ಷ ಮಾಡಿ ಈ ತಳಿಯ ಸಮೂಹವನ್ನು

ಅಭಿವೃದ್ಧಿಪಡಿಸಲಾಗಿದೆ. ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿ ಈ ತಳಿಯು ಪ್ರತೀ ಮರಕ್ಕೆ ಪ್ರತೀ ವರ್ಷಕ್ಕೆ ಸುಮಾರು 123 ಕಾಯಿಗಳನ್ನು ಕೊಡುತ್ತದೆ ಮತ್ತು ಚೌಘಾಟ್ ಕಿತ್ತಳೆ ಗಿಡ್ಡ ತಳಿಗಿಂತ ಶೇ. 71.18ರಷ್ಟು ಅಧಿಕ ಇಳುವರಿಯನ್ನು ಕೊಡಬಲ್ಲದೆಂದು ತಿಳಿದುಬಂದಿದೆ. ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿ ಮತ್ತು ಉತ್ತಮ ನಿರ್ವಹಣೆ ಇರುವ ತೋಟಗಳಲ್ಲಿ ಈ ತಳಿಯು ವಾರ್ಷಿಕವಾಗಿ ಪ್ರತೀ ಮರಕ್ಕೆ 183 ಕಾಯಿಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಎಳನೀರಿನ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಈ ತಳಿಯು ಸಹಾಯಕವಾಗಲಿದೆ. ಇದರ ಜೊತೆಗೆ ಕರಾವಳಿ ಕೇರಳದ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡಿನಲ್ಲಲ್ಲದೇ, ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ತೆಂಗು ಸಂಶೋಧನ ಕೇಂದ್ರಗಳಾದ ತಮಿಳುನಾಡಿನ ಅಲಿಯಾರ್‌ನಗರ್ ಮತ್ತು ಕರ್ನಾಟಕದ ಅರಸೀಕೆರೆಯ ಸಂಶೋಧನಾ ಕೇಂದ್ರಗಳಲ್ಲಿ ಸಹ ಈ ತಳಿಯು ಅಧಿಕ ಇಳುವರಿ ಕೊಡುವುದು ಸಾಬೀತಾಗಿದೆ.

ಈ ತಳಿಯ ಮರಗಳು ಗಿಡ್ಡವಾಗಿದ್ದು ದಟ್ಟವಾದ ಗೋಲಾಕಾರದ ಚೆಂಡೆ ಮತ್ತು ಜೋತುಬಿದ್ದಿರುವ ಎಲೆಯ ತುದಿಯನ್ನು ಹೊಂದಿರುತ್ತವೆ. ಕಾಯಿಗಳು ಮಧ್ಯಮ ಗಾತ್ರದಲ್ಲಿ, ಅಂಡಾಕಾರದಲ್ಲಿದ್ದು ಕಿತ್ತಳೆ ಬಣ್ಣವನ್ನು ಹೊಂದಿರುತ್ತವೆ. ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿ ಈ ತಳಿಯ ಮರವು 3 ವರ್ಷಗಳೊಳಗೆ ಹೂ ಬಿಡಲು ಪ್ರಾರಂಭಿಸುತ್ತದೆ ಮತ್ತು 26 ವರ್ಷಗಳಲ್ಲಿ ಸುಮಾರು 6.5ಮೀಟರ್ ಎತ್ತರ ಬೆಳೆಯುತ್ತದೆ. ಆದರೆ, ಮಳೆಯಾಶ್ರಿತ ಪ್ರದೇಶಗಳಲ್ಲಿ ಶೇ. 50ರಷ್ಟು ಮರಗಳು ಹೂ ಬಿಡಲು ಸರಾಸರಿ 59 ತಿಂಗಳುಗಳನ್ನು ತೆಗೆದುಕೊಳ್ಳುತ್ತವೆ. ಈ ತಳಿಯ ಬೀಜದ ಕಾಯಿಗಳು ಬಹುಬೇಗನೆ ಮೊಳಕೆಯೊಡೆಯುವ ಗುಣವನ್ನು ಹೊಂದಿದ್ದು ಶೇ. 50ರಷ್ಟು ಬೀಜದ ಕಾಯಿಗಳು 66 ದಿನಗಳೊಳಗೆ ಮೊಳಕೆಯೊಡೆಯುತ್ತವೆ. ಶೇಖರಣೆ ಸಮಯದಲ್ಲೂ ಬೀಜದ ಕಾಯಿಗಳು ಮೊಳಕೆಯೊಡೆಯುವುದು ಈ ತಳಿಯಲ್ಲಿ ಕಂಡುಬಂದಿದೆ. ಇಂದ್ರಿಯಗಳ ಮೇಲಿನ ಪರಿಣಾಮ ಉಂಟು ಮಾಡುವ ಆಧಾರದ ಮೇಲೆ ನಡೆದ ಮೌಲ್ಯಮಾಪನದ ಪ್ರಕಾರ (ಆರ್ಗ್ಯಾನೋಲೆಪ್ಟಿಕ್) ಈ ತಳಿಯ ಎಳನೀರನ್ನು ರುಚಿಯಲ್ಲಿ 'ಅತ್ಯುತ್ತಮ' ವೆಂದು ವರ್ಗೀಕರಿಸಲಾಗಿದೆ. ಈ ತಳಿಯು ಉತ್ತಮ ರುಚಿಯ ಸುಮಾರು 400ಮಿ.ಲೀ. ಎಳನೀರನ್ನು ಹೊಂದಿದೆ. ಕಲ್ಪ ಸೂರ್ಯ ತಳಿಯ 100ಮಿ.ಲೀ. ಎಳನೀರಿನಲ್ಲಿ 6.7ಗ್ರಾಂ ಒಟ್ಟು ಸಕ್ಕರೆ, 1.8ಮಿ.ಗ್ರಾಂ ಮುಕ್ತ ಅಮಿನೋ ಆಮ್ಲಗಳು ಅಲ್ಲದೇ 35ಪಿಪಿಎಮ್ ಸೋಡಿಯಮ್ ಮತ್ತು 2142ಪಿಪಿಎಮ್ ಪೊಟಾಷಿಯಮ್ ಇರುತ್ತದೆ.

ಈ ತಳಿಯನ್ನು ಸಾಕಷ್ಟು ನೀರಾವರಿ ಸೌಲಭ್ಯವಿರುವ ಪರಿಸ್ಥಿತಿಗಳಲ್ಲಿ ಬೆಳೆಯಲು ಶಿಫಾರಸು ಮಾಡಲಾಗಿದೆ. ಯಾವುದೇ ಪ್ರಮುಖ ಕೀಟ ಮತ್ತು ರೋಗಗಳ ಹಾವಳಿ ಈ ತಳಿಯಲ್ಲಿ ಕಂಡುಬಂದಿಲ್ಲ. ಆದರೆ, ಈ ತಳಿಯ ಮರಗಳು ಸ್ವಲ್ಪ ಮಟ್ಟಿಗೆ ನುಸಿ ಕೀಟ, ಕುರುವಾಯಿ ದುಂಬಿ ಮತ್ತು ಕೆಂಪು ಮೂತಿ

ದುಂಬಿಗಳ ಹಾವಳಿಗೆ ತುತ್ತಾಗುತ್ತವೆ ಹಾಗೂ ಸ್ವಲ್ಪ ಮಟ್ಟಿಗೆ ಸುಳಿ ಕೊಳೆ ರೋಗ ಮತ್ತು ಕಾಯಿ ಕೊಳೆ ರೋಗಕ್ಕೂ ಈಡಾಗುತ್ತವೆ.

ಕರಾವಳಿ ಕೇರಳದ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು, ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ತೆಂಗು ಸಂಶೋಧನ ಕೇಂದ್ರಗಳಾದ ತಮಿಳುನಾಡಿನ ಅಲಿಯಾರ್‌ನಗರ್ ಮತ್ತು ಕರ್ನಾಟಕದ ಅರಸೀಕೆರೆಯ ಸಂಶೋಧನ ಕೇಂದ್ರಗಳಲ್ಲಿ ಈ ತಳಿಯ ಉತ್ಕೃಷ್ಟ ಪ್ರದರ್ಶನಕ್ಕಾಗಿ 2012ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಇಪ್ಪತ್ತೊಂದನೆಯ ಸಭೆಯಲ್ಲಿ ಈ ತಳಿಯನ್ನು ಎಳನೀರು ತಳಿಯಾಗಿ ಕೇರಳ, ಕರ್ನಾಟಕ ಮತ್ತು ತಮಿಳು ನಾಡು ರಾಜ್ಯಗಳಲ್ಲಿ ತೆಂಗು ಬೆಳೆಯುವ ಪ್ರದೇಶಗಳಿಗೆ ಶಿಫಾರಸು ಮಾಡಲಾಗಿದೆ.



**ಕಲ್ಪ ಸೂರ್ಯ ಬೀಜದ ಕಾಯಿಗಳು ಬಹುಬೇಗನೆ ಮೊಳಕೆಯೊಡೆದಿರುವುದು**



**ಕಲ್ಪ ಸೂರ್ಯ**

## 1.5. ಕಲ್ಪರಕ್ಷಾ

ಕಲ್ಪರಕ್ಷಾ ಮಧ್ಯಮ ಎತ್ತರದ ತೆಂಗಿನ ತಳಿಯಾಗಿದ್ದು, ತೆಂಗು ಕೃಷಿಯನ್ನು ಮಾರಕವಾಗಿ ಕಾಡುವ ಬೇರು ಸೊರಗು ರೋಗಕ್ಕೆ ರೋಗನಿರೋಧಕ ಶಕ್ತಿಯನ್ನು ಹೊಂದಿದ್ದು ಸಿಹಿಯಾದ ಎಳನೀರನ್ನು ಹೊಂದಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ.ನ ಪ್ರಾಂತೀಯ ಕ್ಷೇತ್ರ ಕಾಯಂಕುಲಮ್‌ನಲ್ಲಿ ಪ್ರಮುಖ ಎಳನೀರು ತಳಿಯಾಗಿ ಅಭಿವೃದ್ಧಿಪಡಿಸಿದ್ದು, ಮಲಾಯನ್ ಹಸಿರು ಗಿಡ್ಡ ತಳಿಗಳ ಸಮೂಹದಿಂದ ಆಯ್ಕೆ ಮಾಡಲಾಗಿದೆ. ಬೇರು ಸೊರಗು ರೋಗ ತೆಂಗನ್ನು ತೀವ್ರವಾಗಿ ಕಾಡುವ ಪ್ರದೇಶಗಳಲ್ಲಿ 15 ವರ್ಷ ಪ್ರಾಯವುಳ್ಳ ಪಶ್ಚಿಮ ತೀರದ ಎತ್ತರ ತಳಿಯು ಶೇ. 84ರಷ್ಟು ರೋಗಬಾಧೆಗೆ ತುತ್ತಾಗುತಿದ್ದು, ರೋಗದ ಸರಾಸರಿ ಸೂಚ್ಯಾಂಕ 45 ಇದ್ದರೆ, ಅದೇ ಪ್ರಾಯದ ಕಲ್ಪರಕ್ಷಾ ತಳಿಯಲ್ಲಿ ರೋಗಬಾಧೆ ಕೇವಲ ಶೇ. 22.4ರಷ್ಟಿದ್ದು, ರೋಗದ ಸರಾಸರಿ ಸೂಚ್ಯಾಂಕ 15.5ರಷ್ಟು ಇರುವುದು

ಕಂಡುಬಂದಿದೆ. ನಾಟಿ ಮಾಡಿದ 55 ತಿಂಗಳಿಗೆ ಹೂ ಬಿಟ್ಟು ಕಾಯಿ ಕಟ್ಟುವ ಈ ತಳಿಯ ತೆಂಗಿನ ಮರಗಳು, 12ನೆಯ ವಯಸ್ಸಿನಲ್ಲಿ ಸಾಧಾರಣವಾಗಿ 4.14ಮೀ. ನಷ್ಟು ಎತ್ತರ ಬೆಳೆಯುತ್ತವೆ.

ಈ ತಳಿಯ ತೆಂಗುಗಳು ಪ್ರತೀ ವರ್ಷಕ್ಕೆ ಪ್ರತೀ ಮರಕ್ಕೆ ಸರಾಸರಿ 88 ಕಾಯಿಗಳನ್ನು ನೀಡುತ್ತಿದ್ದು, ಕೊಬ್ಬರಿಯೊಂದು 185ಗ್ರಾಂ ತೂಕವಿದ್ದು, ಶೇ. 65.5ರಷ್ಟು ಎಣ್ಣೆ ಅಂಶವನ್ನು ಹೊಂದಿದೆ. ಒಂದು ಹೆಕ್ಟೇರ್ ಭೂಪ್ರದೇಶದಿಂದ ಕಲ್ಪರಕ್ಷಾ ತಳಿಯು 1.87ಟನ್‌ನಷ್ಟು ಎಣ್ಣೆಯನ್ನು ನೀಡಬಲ್ಲುದ್ದಾಗಿದ್ದು, ಇದು ಪಶ್ಚಿಮ ತೀರದ ಎತ್ತರ ತಳಿಗಿಂತ ಅಧಿಕವಾಗಿರುತ್ತದೆ. ಕೇರಳದಲ್ಲಿ ಬೇರು ಸೊರಗು ರೋಗವು ತೀವ್ರವಾಗಿದ್ದು, ಅಂತಹ ಪ್ರದೇಶಗಳಲ್ಲಿ ತೆಂಗು ಕೃಷಿ ಕಷ್ಟಕರವಾದಲ್ಲಿ, ಈ ಕಲ್ಪರಕ್ಷಾ ತಳಿಯು ರೋಗ ಪ್ರತಿರೋಧ ಶಕ್ತಿ ಹೊಂದಿರುವುದರಿಂದ ಎಳನೀರು ತಳಿಯಾಗಿಯೂ, ಎಣ್ಣೆ ಉತ್ಪಾದನೆಗೂ ಈ ತಳಿಯನ್ನು ಬೆಳಸಬಹುದಾಗಿದೆ.

ಬಹು ಸಾಂದ್ರವಾಗಿ ಬೆಳೆಯುವಾಗ ಮಾತ್ರ ಕಲ್ಪರಕ್ಷಾ ತೆಂಗುಗಳಿಗೆ ಹೆಚ್ಚಾಗಿ ಕೆಂಪು ದುಂಬಿಗಳ ಕಾಟ ಉಂಟಾಗುತಿದ್ದು, ಉಳಿದ ತಳಿಗಳಿಗೆ ಹೋಲಿಸಿದರೆ ಈ ತಳಿಯಲ್ಲಿ ಬಹಳಷ್ಟು ಕಡಿಮೆಯಿದೆ. ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡಿನಲ್ಲಿ ಈ ತಳಿಯನ್ನು ಮಳೆಯಾಧಾರಿತವಾಗಿ ಬೆಳಯಲಾಗುತ್ತಿದ್ದು ಪ್ರತೀ ವರ್ಷಕ್ಕೆ ಪ್ರತೀ ಮರಕ್ಕೆ ಸರಾಸರಿ 86.8 ತೆಂಗಿನ ಕಾಯಿಗಳನ್ನು ನೀಡುತ್ತದೆ. ಎಳೆಕಾಯಿಯೊಂದು ಸರಾಸರಿ 290ಮಿ.ಲೀ. ಸಿಹಿಯಾದ 'ಉತ್ತಮ' ಎಳನೀರನ್ನು ನೀಡುತ್ತದೆ ಹಾಗು ಪ್ರತೀ 100ಮಿ.ಲೀ. ಎಳನೀರಿನಲ್ಲಿ 4.92ಗ್ರಾಂ ಸಕ್ಕರೆಯಂಶ, 2100ಪಿಪಿಯಮ್ ಪೊಟಾಶಿಯಂ ಮತ್ತು 19.50ಪಿಪಿಯಂ ಸೋಡಿಯಂ ಖನಿಜಾಂಶಗಳಿರುತ್ತವೆ. ಆದ್ದರಿಂದ ಈ ತಳಿಯನ್ನು ಎಳನೀರು ತಳಿಯಾಗಿ ವಾಣಿಜ್ಯ ಕೃಷಿಗೆ ಶಿಫಾರಸು ಮಾಡಲಾಗಿದೆ.

ಈ ತಳಿಯನ್ನು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯು ತನ್ನ ಹದಿನೆಂಟನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಕೇರಳ ರಾಜ್ಯಕ್ಕೆ ಶಿಫಾರಸ್ಸು ಮಾಡಿದ್ದು ಕೇಂದ್ರ ಬೆಳೆಗಳ ಗುಣಮಟ್ಟದ ಉಪಸಮಿತಿ, ಅಧಿಸೂಚನೆ ಹಾಗು ತಳಿ ಬಿಡುಗಡೆ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ) ವು ಅಧಿಸೂಚನೆ ನಂಬ್ರ ಎಸ್.ಒ. 1714 (ಇ), ದಿನಾಂಕ 18 ಜುಲೈ, 2008 ರಲ್ಲಿ ತಿಳಿಸಿದೆ.



**ಕಲ್ಪರಕ್ಷಾ**


## 2. ಎತ್ತರ ತಳಿಗಳು

### 2.1. ಚಂದ್ರ ಕಲ್ಪ

ಚಂದ್ರ ಕಲ್ಪ ತಳಿಯನ್ನು ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು 1985ರಲ್ಲಿ ಅಭಿವೃದ್ಧಿಪಡಿಸಿ ಬಿಡುಗಡೆಗೊಳಿಸಿದೆ. ಈ ತಳಿಯನ್ನು ಲಕ್ಷದ್ವೀಪದಲ್ಲಿ ಸಾಮಾನ್ಯವಾಗಿ ಬೆಳಯಲಾಗುತ್ತಿರುವ ಲಕ್ಷದ್ವೀಪ ಸಾಮಾನ್ಯ ಎತ್ತರ ತಳಿಯಿಂದ (IND 008) ಆಯ್ಕೆ ಮಾಡಿ ಅಭಿವೃದ್ಧಿ ಪಡಿಸಲಾಗಿದೆ. ಚಂದ್ರ ಕಲ್ಪ ತಳಿಯ ಬೆಳವಣಿಗೆಯ ಲಕ್ಷಣ ಹಾಗು ತೆಂಗಿನ ಕಾಯಿಗಳು ಪಶ್ಚಿಮ ತೀರದ ಎತ್ತರ ತಳಿಯನ್ನು ಹೋಲುತ್ತವೆ. ಆದರೆ ಚಂದ್ರ ಕಲ್ಪ ತಳಿಯ ಬಲಿತ ಕಾಯಿಗಳು ಸ್ವಲ್ಪ ಚಿಕ್ಕದ್ದಾಗಿದ್ದು, ಪ್ರಮುಖವಾಗಿ ಮೂರು ಮೂಲೆಯನ್ನು ಹೊಂದಿರುತ್ತವೆ. ಕಾಯಿಗಳು ಹಸಿರು ಮಿಶ್ರಿತ ಹಳದಿ ಬಣ್ಣದಿಂದ ಹಳದಿ ಮಿಶ್ರಿತ ಹಸಿರು ಬಣ್ಣದ್ದಾಗಿರುತ್ತವೆ. ಈ ತಳಿಯ ಸರಾಸರಿ ಇಳುವರಿಯು ಪ್ರತೀ ವರ್ಷಕ್ಕೆ ಪ್ರತೀ ಮರಕ್ಕೆ 100 ಕಾಯಿಗಳು ಹಾಗು ವಾರ್ಷಿಕ ಅಂದಾಜು ಕೊಬ್ಬರಿ ಇಳುವರಿ ಪ್ರತೀ ಮರಕ್ಕೆ 17ಕಿ.ಗ್ರಾಂ. ನಷ್ಟಿರುತ್ತದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. ಕಾಸರಗೋಡಿನಲ್ಲಿ ಸ್ಥಳೀಯವಾಗಿ ಬೆಳೆಯುವ ಪಶ್ಚಿಮ ತೀರದ ಎತ್ತರ ತಳಿಗಳಿಗೆ ಹೋಲಿಸುವಾಗ ಈ ತಳಿಯು ಶೇ. 25ರಷ್ಟು ಹೆಚ್ಚಿನ ಕಾಯಿಗಳನ್ನು ಮತ್ತು ಶೇ. 27.5ರಷ್ಟು ಹೆಚ್ಚಿನ ಕೊಬ್ಬರಿ ಇಳುವರಿಯನ್ನು ನೀಡುತ್ತದೆ.

ಕಾಯಿಗಳು ಮಧ್ಯಮ ಗಾತ್ರದ್ದಾಗಿದ್ದು, ಸರಾಸರಿ 800ಗ್ರಾಂ ತೂಕವಿದ್ದು, ಪ್ರತೀ ಕಾಯಿಯು 176ಗ್ರಾಂ ಕೊಬ್ಬರಿಯನ್ನು ಹೊಂದಿದ್ದು, ಕೊಬ್ಬರಿಯಲ್ಲಿ ಎಣ್ಣೆಯಂಶ ಶೇ. 72ರಷ್ಟಿರುತ್ತದೆ. ಆದ್ದರಿಂದ ಈ ತಳಿಯು ಒಣ ಕೊಬ್ಬರಿ ತಯಾರಿಕೆಗೆ ಬಲು ಸೂಕ್ತ. ಒಂದು ಟನ್ ಕೊಬ್ಬರಿ ತಯಾರಿಕೆಗೆ ಅಂದಾಜು 6000 ದಿಂದ 7000 ಕಾಯಿಗಳು ಬೇಕಾಗುತ್ತವೆ. ಈ ತಳಿಯ ಕೊಬ್ಬರಿ ಎಣ್ಣೆಯಲ್ಲಿ ಸಾಧಾರಣವಾಗಿ ಹೆಚ್ಚಿನ ಪ್ರಮಾಣದ ಮಧ್ಯಮ ಸರಪಳಿ ಕೊಬ್ಬಿನಾಮ್ಲಗಳಿದ್ದು, ಸೇವನೆಗೆ ಯೋಗ್ಯವಾಗಿದೆ. ಅಲ್ಲದೆ ಈ ತಳಿಯ ತೆಂಗಿನ ಎಣ್ಣೆಯಲ್ಲಿ ಅಧಿಕ ಪ್ರಮಾಣದ ಸಾತೃಪ್ತ ಕೊಬ್ಬಿನಾಂಶ ಹಾಗು ಲೌರಿಕ್ ಆಮ್ಲಗಳಿರುವುದರಿಂದ (ಶೇ.48.9) ಔಷಧ ಉಧ್ಯಮಗಳಲ್ಲಿ ಈ ತಳಿಗೆ ಆದ್ಯತೆಯನ್ನು ನೀಡಲಾಗುತ್ತಿದೆ. ಚಂದ್ರ ಕಲ್ಪ ತಳಿಯಲ್ಲಿ ಎಳನೀರಿನ ಪ್ರಮಾಣ ಅಂದಾಜು 285ಮಿ.ಲೀ. ಇದ್ದು, ಇಂದ್ರಿಯಗಳ ಮೇಲಿನ ಪರಿಣಾಮ ಉಂಟು ಮಾಡುವ ಆಧಾರದ ಮೇಲೆ ನಡೆದ ಮೌಲ್ಯಮಾಪನದ ಪ್ರಕಾರ (ಆರ್ಗ್ಯಾನೋಲೆಪ್ಟಿಕ್) ಈ ಎಳನೀರನ್ನು ರುಚಿಯಲ್ಲಿ 'ಉತ್ತಮ' ವೆಂದು ವರ್ಗೀಕರಿಸಲಾಗಿದೆ. 100ಮಿ.ಲೀ. ಎಳನೀರಿನಲ್ಲಿ 4.2ಗ್ರಾಂ ಒಟ್ಟು ಸಕ್ಕರೆ, 50ಪಿಪಿಎಮ್ ಸೋಡಿಯಮ್ ಹಾಗು 2762ಪಿಪಿಎಮ್ ಪೊಟಾಷಿಯಂ ಇರುತ್ತದೆ. ಈ ತಳಿಯ ಮರಗಳು ಕಲ್ಪರಸ ಉತ್ಪಾದನೆಗೂ ಉತ್ತಮವಾಗಿವೆ.

ಈ ತಳಿಯನ್ನು ಎಲ್ಲಾ ರೀತಿಯ ಮಣ್ಣುಗಳಲ್ಲಿ ಬೆಳೆಯಬಹುದಾಗಿದ್ದು, ನೀರಿನ ಅಭಾವವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು, ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಸಂಶೋಧನಾ ಕೇಂದ್ರ, ಕಿದು ಹಾಗು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಎಲ್ಲಾ ಕೇಂದ್ರಗಳಲ್ಲಿ ಈ ತಳಿಯ ಉತ್ತಮ ಇಳುವರಿಯ ಆಧಾರದ ಮೇರೆಗೆ ಕೇರಳ, ಕರ್ನಾಟಕ, ಆಂಧ್ರ ಪ್ರದೇಶ, ತಮಿಳು ನಾಡು ಹಾಗು ಮಹಾರಾಷ್ಟ್ರ ರಾಜ್ಯಗಳಲ್ಲಿ ವಾಣಿಜ್ಯ ಕೃಷಿಗಾಗಿ 1985ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಏಳನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಶಿಫಾರಸು ಮಾಡಲಾಗಿದೆ.



**ಚಂದ್ರ ಕಲ್ಪ**

### 2.2. ಕೇರಚಂದ್ರ

ಫಿಲಿಪ್ಪೈನ್ಸ್ ದೇಶದಿಂದ ಆಮದು ಮಾಡಿಕೊಳ್ಳಲಾದ ಫಿಲಿಪ್ಪೈನ್ಸ್ ಸಾಮಾನ್ಯ ಎತ್ತರ ತಳಿಗಳ (IND 014) ಸಮೂಹದಿಂದ ಕೇರಚಂದ್ರ ತಳಿಯನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲಾಗಿದೆ. ವೃತ್ತಾಕಾರದ ಮತ್ತು ಹಸಿರು ಬಣ್ಣದ ದೊಡ್ಡ ಗಾತ್ರದ ಕಾಯಿಗಳನ್ನು ವರ್ಷವಿಡೀ ನೀಡುವ ಈ ತಳಿಯ ತೆಂಗಿನ ಮರಗಳು 25ನೆಯ ವಯಸ್ಸಿಗೆ ಸುಮಾರು 10 ರಿಂದ 12ಮೀ. ನಷ್ಟು ಎತ್ತರ ಬೆಳೆಯುತ್ತವೆ. ಸ್ಥಳೀಯ ಪಶ್ಚಿಮ ತೀರದ ಎತ್ತರ ತಳಿಯ ತೆಂಗಿನ ಮರಗಳಿಗೆ ಹೋಲಿಸುವಾಗ ಕೇರಚಂದ್ರ ತಳಿಯ ಪ್ರತೀ ಮರ ವಾರ್ಷಿಕ ಸರಾಸರಿ 110 ಕಾಯಿಗಳನ್ನು, ಅಂದರೆ ಶೇ. 37.5ರಷ್ಟು ಹೆಚ್ಚಿನ ಕಾಯಿಗಳು ಹಾಗು 20.8ಕಿ.ಗ್ರಾಂ. ಕೊಬ್ಬರಿಯನ್ನು ಅಂದರೆ ಶೇ. 50.7ರಷ್ಟು ಹೆಚ್ಚಿನ ಕೊಬ್ಬರಿಯನ್ನು ನೀಡುತ್ತದೆ. ಈ ತಳಿಯ ಬಹುತೇಕ ಬೀಜದ ಕಾಯಿಗಳು ಬೇಗನೆ ಅಂದರೆ ಸಸಿಮಡಿಗಳಲ್ಲಿ ನಾಟಿ ಮಾಡಿದ ಎರಡು ತಿಂಗಳೊಳಗೆ ಮೊಳಕೆಯೊಡೆಯುತ್ತವೆ. ತೆಂಗಿನ ಕಾಯಿಗಳು ದೊಡ್ಡ ಗಾತ್ರವನ್ನು ಹೊಂದಿದ್ದು, ಸರಾಸರಿ ಪ್ರತೀ ಕಾಯಿಯಲ್ಲಿ 198ಗ್ರಾಂ ಕೊಬ್ಬರಿಯಂಶವಿದ್ದು, ಕೊಬ್ಬರಿಯಲ್ಲಿ ಶೇ. 66ರಷ್ಟು ಎಣ್ಣೆಯ

ಅಂಶವಿರುತ್ತದೆ. ಕೊಬ್ಬರಿಯಲ್ಲಿ ಅಧಿಕ ಪ್ರಮಾಣದ ಸಂತೃಪ್ತ ಕೊಬ್ಬಿನಾಮ್ಲವಿದ್ದು, ಸಾಬೂನೀಕರಣ ಮೌಲ್ಯ ಅಧಿಕವಾಗಿರುವುದರಿಂದ ಸಾಬೂನು ತಯಾರಿಕೆಗೆ ಈ ತಳಿಯ ಎಣ್ಣೆ ಬಹು ಸೂಕ್ತ.

ಕೇರಚಂದ್ರ ತಳಿಯು ಉತ್ತಮ ಪ್ರಮಾಣದ ಹಾಗೂ ಉತ್ತಮ ಗುಣಮಟ್ಟದ ಎಳನೀರನ್ನು ಹೊಂದಿದೆ. ಈ ತಳಿಯ ಎಳನೀರನ್ನು ರುಚಿಯಾನುಸಾರ 'ಅತ್ಯುತ್ತಮ' ವೆಂದು ಪರಿಗಣಿಸಲಾಗಿದ್ದು, ಪ್ರತೀ ಎಳನೀರಲ್ಲಿ 450ಮಿ.ಲೀ. ನೀರಿರುತ್ತದೆ. ಪ್ರತೀ 100ಮಿ.ಲೀ. ಎಳನೀರಿನಲ್ಲಿ 5.86ಗ್ರಾಂ ಸಕ್ಕರೆಯಂಶ, 24ಪಿಪಿಯಂ ಸೋಡಿಯಮ್ ಹಾಗೂ 2273ಪಿಪಿಯಂ ಪೊಟಾಸಿಯಂ ಇರುತ್ತದೆ. ಇಡಿ ಕೊಬ್ಬರಿ ಉತ್ಪಾದಿಸುವ ಪ್ರಕ್ರಿಯೆಯಲ್ಲಿ ಶೇ. 75ಕ್ಕಿಂತ ಅಧಿಕ ಕಾಯಿಗಳು ಮೊಳಕೆಯೊಡೆದು ಹಾಳಾಗುವುದರಿಂದ ಇಡಿ ಕೊಬ್ಬರಿ ತಯಾರಿಕೆಗೆ ಸೂಕ್ತವಲ್ಲದ ತಳಿಯಾಗಿದೆ.

ಕರಾವಳಿ ಕೇರಳದಲ್ಲಿರುವ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. ಹಾಗೂ ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿನ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರಗಳಲ್ಲಿ ಕೇರಚಂದ್ರ ತಳಿಯು ಉತ್ತಮ ಪ್ರದರ್ಶನವನ್ನು ತೋರಿಸಿತ್ತು. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. ಅಭಿವೃದ್ಧಿಪಡಿಸಿ 'ರಾಷ್ಟ್ರೀಯ ತಳಿ' ಎಂದು ಬಿಡುಗಡೆಗಾಗಿ ಮಂಡಿಸಿದ ಈ ತಳಿಯ ಉತ್ತಮ ಇಳುವರಿಯ ಆಧಾರದ ಮೇರೆಗೆ ಕೊಂಕಣ ಪ್ರದೇಶ, ಕರಾವಳಿ ಆಂಧ್ರ ಪ್ರದೇಶ ಸೇರಿದಂತೆ ದೇಶದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಹಾಗೂ ಪಶ್ಚಿಮ ಬಂಗಾಳ ರಾಜ್ಯದಲ್ಲಿ ವಾಣಿಜ್ಯ ಕೃಷಿಗಾಗಿ 1995ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹನ್ನೆರಡನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಶಿಫಾರಸು ಮಾಡಲಾಗಿದೆ.



**ಕೇರಚಂದ್ರ**

## 2.3. ಕಲ್ಪ ಪ್ರತಿಭಾ

ಅಧಿಕ ಇಳುವರಿಯನ್ನು ಕೊಡುವ, ಕೊಬ್ಬರಿ ಮತ್ತು ಎಳನೀರು ಎರಡೂ ಉತ್ಪಾದನೆಗಾಗಿ ಬೆಳಯಲಾಗುತ್ತಿರುವ ಕೊಚ್ಚಿನ್ ಚೈನಾ ಎತ್ತರ (IND 016), ಎಂಬ ತಳಿಯಿಂದ ಆಯ್ಕೆ ಮಾಡಿ ಕಲ್ಪ

ಪ್ರತಿಭಾ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಳಿಯ ತೆಂಗಿನ ಮರಗಳು ಮಳೆಯಾಧಾರಿತ ಪ್ರದೇಶಗಳಲ್ಲಿ ವರ್ಷವಿಡೀ ಇಳುವರಿಯನ್ನು ಕೊಡುತ್ತಿದ್ದು, ನಾಟಿ ಮಾಡಿದ 6-7 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಈ ತಳಿಯ ಮರಗಳು ಎತ್ತರದ ಜಾತಿಯದ್ದಾಗಿದ್ದು, ದಟ್ಟವಾದ ಗೋಲಾಕಾರದ ಮೇಲ್ಕಟ್ಟನ್ನು ಹೊಂದಿರುತ್ತವೆ. ಕಾಯಿಗಳು ಪ್ರಮುಖವಾಗಿ ಹಸಿರು ಬಣ್ಣವನ್ನು ಹೊಂದಿದ್ದು, ವೃತ್ತಾಕಾರಾದಲ್ಲಿದ್ದು, ದೊಡ್ಡ ಗಾತ್ರದಲ್ಲಿರುತ್ತವೆ. ಬೀಜದ ಕಾಯಿಗಳು ಬೇಗನೆ ಮೊಳಕೆಯೊಡೆಯುವ ಗುಣವನ್ನು ಹೊಂದಿದ್ದು, ನಾಟಿ ಮಾಡಿದ 62 ದಿನಗಳಲ್ಲಿ ಶೇ. 50ರಷ್ಟು ಬೀಜದ ಕಾಯಿಗಳು ಮೊಳಕೆಯೊಡೆಯುತ್ತವೆ. ಈ ತಳಿಯ ಸರಾಸರಿ ಇಳುವರಿ ಪ್ರತೀ ವರ್ಷಕ್ಕೆ ಪ್ರತೀ ಮರಕ್ಕೆ 98 ಕಾಯಿಗಳು.

ಈ ತಳಿಯ ತೆಂಗಿನ ಕಾಯಿಯ ಸರಾಸರಿ ತೂಕ 1332ಗ್ರಾಂ. ನಷ್ಟಿದ್ದು, ಒಂದು ಕಾಯಿಯಿಂದ ಸರಾಸರಿ 256.37ಗ್ರಾಂ. ನಷ್ಟು ಒಣ ಕೊಬ್ಬರಿ ದೊರೆಯುತ್ತದೆ. ಕೊಬ್ಬರಿಯಲ್ಲಿ ಶೇ. 67ರಷ್ಟು ಎಣ್ಣೆಯಂಶವಿರುತ್ತದೆ. ಈ ತಳಿಯ ಕೊಬ್ಬರಿಯಿಂದ ಸಂಸ್ಕರಿಸಿದ ಎಣ್ಣೆಯಲ್ಲಿ ಶೇ. 47.81ರಷ್ಟು ಲೌರಿಕ್ ಆಮ್ಲವಿರುತ್ತದೆ. ಎಳನೀರನ್ನು 'ಉತ್ತಮ ರುಚಿ' ಯದೆಂದು ವರ್ಗೀಕರಿಸಲಾಗಿದ್ದು, ಸರಾಸರಿ 448ಮಿ.ಲೀ. ನಷ್ಟು ನೀರಿರುತ್ತದೆ. 100ಮಿ.ಲೀ. ಎಳನೀರಿನಲ್ಲಿ 5.5ಗ್ರಾಂ ಸಕ್ಕರೆಯಂಶ, 1.1ಮಿ.ಗ್ರಾಂ ಉಚಿತ ಅಮೀನೊ ಆಮ್ಲಗಳು, 2150ಪಿಪಿಯಂ ಪೊಟಾಷಿಯಂ, 21.7ಪಿಪಿಯಂ ಸೋಡಿಯಂ ಇರುತ್ತದೆ.

ಈ ತಳಿಯು ಸ್ವಲ್ಪಮಟ್ಟಿಗೆ ಬರ ಪರಿಸ್ಥಿತಿಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಈ ತಳಿಯ ಸರಾಸರಿ ಇಳುವರಿ ಪ್ರತೀ ಹೆಕ್ಟೇರಿಗೆ 4.07ಟನ್ ಕೊಬ್ಬರಿ; 2.73ಟನ್ ಎಣ್ಣೆ; 15874 ಕಾಯಿಗಳು. ಈ ತಳಿಯು ವಾರ್ಷಿಕ ಪ್ರತೀ ಹೆಕ್ಟೇರಿಗೆ ಅಂದಾಜು 23275 ಕಾಯಿಗಳನ್ನು, ಅಂದರೆ 5.97ಟನ್ ಕೊಬ್ಬರಿಯಿಂದ 4.01ಟನ್ ಎಣ್ಣೆ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಸ್ಥಳೀಯ ಪಶ್ಚಿಮ ತೀರದ ಎತ್ತರ ತಳಿಯ ತೆಂಗಿನ ಮರಗಳಿಗೆ ಹೋಲಿಸುವಾಗ, ಪ್ರತಿ ಹೆಕ್ಟೇರಿಗೆ ಕಲ್ಪ ಪ್ರತಿಭಾ ತಳಿಯು ಅಂದಾಜು ಶೇ. 40.11ರಷ್ಟು ಹೆಚ್ಚಿನ ಕೊಬ್ಬರಿಯನ್ನು ಹಾಗು ಶೇ. 38.05ರಷ್ಟು ಹೆಚ್ಚಿನ ಎಣ್ಣೆಯನ್ನು ನೀಡುತ್ತದೆ. ಈ ಉತ್ತಮ ಇಳುವರಿಯ ತಳಿಯು ದೇಶದಲ್ಲಿನ ತೆಂಗು ಉತ್ಪಾದಕತೆಯನ್ನು ವೃದ್ಧಿಸಲು ಸಹಾಯಕವಾಗಲಿದೆ.

ಈ ತಳಿಯನ್ನು ಕೇರಳ, ಆಂಧ್ರ ಪ್ರದೇಶ, ತಮಿಳು ನಾಡು ಹಾಗು ಮಹಾರಾಷ್ಟ್ರ ರಾಜ್ಯಗಳಿಗೆ ಶಿಫಾರಸು ಮಾಡಲಾಗಿದೆ. ಕೇರಳದ ಕರಾವಳಿಯ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಹಾಗು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರಗಳಾದ, ಆಂಧ್ರ ಪ್ರದೇಶದ ಅಂಬಾಜಿಪೇಟ, ತಮಿಳು ನಾಡಿನ ವೆಪ್ಪಂಕುಲಂ, ಅಲೀಯಾರ್‌ನಗರ ಹಾಗು ಮಹಾರಾಷ್ಟ್ರ

ರಾಜ್ಯದ ರತ್ನಗಿರಿಯಲ್ಲಿ ತೋರಿದ ಉತ್ತಮ ಇಳುವರಿಯ ಆಧಾರದ ಮೇರೆಗೆ ವಾಣಿಜ್ಯ ಕೃಷಿಗಾಗಿ ಜುಲೈ 2007ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹದಿನೆಂಟನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಶಿಫಾರಸು ಮಾಡಲಾಗಿದೆ. ನಂತರದಲ್ಲಿ ಕೇಂದ್ರ ಬೆಳೆಗಳ ಗುಣಮಟ್ಟದ ಉಪಸಮಿತಿಯ ಅಧಿಸೂಚನೆ ಹಾಗು ಪ್ರಕಟಣೆಯಲ್ಲಿ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ) ವು ಅಧಿಸೂಚನೆ ನಂಬ್ರ ಎಸ್.ಒ. 1714 (ಇ), ದಿನಾಂಕ 18 ಜುಲೈ, 2008ರ ಪ್ರಕಾರ ಬಿಡುಗಡೆಗೊಳಿಸಿದೆ.



**ಕಲ್ಪ ಪ್ರತಿಭಾ**

### 2.4. ಕಲ್ಪ ಧೇನು

ಕಲ್ಪ ಧೇನು ತಳಿಯನ್ನು ಅಧಿಕ ಇಳುವರಿ ಕೊಡುವ ಹಾಗು ಸ್ವಲ್ಪ ಮಟ್ಟಿಗೆ ಬರ ಸಹಿಷ್ಣುತೆ ಶಕ್ತಿಯನ್ನು ಹೊಂದಿರುವ ಅಂಡಮಾನ್ ದೈತ್ಯ ಎತ್ತರ (IND 006) ಎಂಬ ತಳಿಯಿಂದ ಆಯ್ಕೆ ಮಾಡಿ ಅಭಿವೃದ್ಧಿ ಪಡಿಸಲಾಗಿದೆ. ಈ ತಳಿಯ ಮರಗಳು ನಿಯತವಾಗಿ ಇಳುವರಿಯನ್ನು ಕೊಡುವಂತಹವುಗಳಾಗಿದ್ದು, ಮಳೆಯಾಧಾರಿತ ಪ್ರದೇಶಗಳಲ್ಲಿ ನಾಟಿ ಮಾಡಿದ 6-7 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಈ ತಳಿಯ ಮರಗಳು ಎತ್ತರವಾಗಿದ್ದು, ದಷ್ಟಪುಷ್ಟವಾಗಿರುತ್ತವೆ. ಈ ತಳಿಯ ತೆಂಗಿನ ಕಾಯಿಗಳು ದೊಡ್ಡದಾಗಿದ್ದು, ಅಂಡಾಕಾರವನ್ನು ಹೊಂದಿದ್ದು, ಹಸಿರು ಬಣ್ಣದಿಂದ ಕೂಡಿರುತ್ತವೆ. ಈ ತಳಿಯ ಶೇ. 50ರಷ್ಟು ಬೀಜದ ಕಾಯಿಗಳು 99 ದಿನಗಳಲ್ಲಿ ಮೊಳಕೆಯೊಡೆಯುತ್ತವೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಈ ತಳಿಯು ಪ್ರತೀ ಹೆಕ್ಟೇರಿಗೆ ಸರಾಸರಿ 3.66 ಟನ್ ಕೊಬ್ಬರಿ; 2.4 ಟನ್ ಎಣ್ಣೆ; 15012 ಕಾಯಿಗಳನ್ನು ಕೊಡುತ್ತದೆ. ಈ ತಳಿಯ ಇಳುವರಿಯು ಸ್ಥಳೀಯವಾಗಿ ಬೆಳೆಯಲಾಗುವ ಪಶ್ಚಿಮ ತೀರದ ಎತ್ತರ ತಳಿಗೆ ಹೋಲಿಸಿದಾಗ ಉತ್ತಮವಾಗಿದ್ದು, ಶೇ. 26.07ರಷ್ಟು ಅಧಿಕ ಕೊಬ್ಬರಿ ಇಳುವರಿ ಮತ್ತು ಶೇ. 21.44ರಷ್ಟು ಅಧಿಕ ಎಣ್ಣೆಯ ಇಳುವರಿಯನ್ನು ಕೊಡುತ್ತದೆಯೆಂದು ತಿಳಿದು ಬಂದಿದೆ. ಈ ತಳಿಯು ವಾರ್ಷಿಕ ಪ್ರತೀ ಹೆಕ್ಟೇರಿಗೆ ಅಂದಾಜು 22794

ಕಾಯಿಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು ಇಷ್ಟು ಕಾಯಿಗಳಿಂದ 3.64 ಟನ್‌ನಷ್ಟು ಎಣ್ಣೆಯನ್ನು ಹೊಂದಿರುವ 5.56 ಟನ್ ಕೊಬ್ಬರಿಯನ್ನು ಪಡೆಯಬಹುದಾಗಿದೆ.

ಈ ತಳಿಯ ಒಂದು ತೆಂಗಿನ ಕಾಯಿಯ ಸರಾಸರಿ ತೂಕ 1381.26ಗ್ರಾಂ. ನಷ್ಟಿದ್ದು, ಪ್ರತೀ ಕಾಯಿಯಿಂದ 243.93ಗ್ರಾಂ. ಒಣ ಕೊಬ್ಬರಿಯನ್ನು ಪಡೆಯಬಹುದು. ಕೊಬ್ಬರಿಯಲ್ಲಿ ಶೇ. 65.5ರಷ್ಟು ಎಣ್ಣೆಯಿರುತ್ತದೆ. ಈ ತಳಿಯ ಕೊಬ್ಬರಿಯಿಂದ ತಯಾರಿಸಿದ ಎಣ್ಣೆಯಲ್ಲಿ ಶೇ. 50.26ರಷ್ಟು ಲೌರಿಕ್ ಆಮ್ಲವಿರುತ್ತದೆ. ಈ ತಳಿಯ ಎಳೆ ಕಾಯಿಯಲ್ಲಿ ಸರಾಸರಿ 290ಮಿ.ಲೀ. ನಷ್ಟು ಎಳನೀರಿರುತ್ತದೆ. ಇಂದ್ರಿಯಗಳ ಮೇಲಿನ ಪರಿಣಾಮ ಉಂಟು ಮಾಡುವ ಆಧಾರದ ಮೇಲೆ ನಡೆದ ಮೌಲ್ಯಮಾಪನದ ಪ್ರಕಾರ (ಆರ್ಗ್ಯಾನೋಲೆಪ್ಟಿಕ್) ಈ ಎಳನೀರನ್ನು ರುಚಿಯಲ್ಲಿ 'ಸಾಧಾರಣ' ವೆಂದು ವರ್ಗೀಕರಿಸಲಾಗಿದ್ದು, 100ಮಿ.ಲೀ. ಎಳನೀರಿನಲ್ಲಿ 4.92ಗ್ರಾಂ ಒಟ್ಟು ಸಕ್ಕರೆ, 1.3ಮಿ.ಗ್ರಾಂ ಅಮೀನೋ ಆಮ್ಲ, 2650ಪಿಪಿಎಮ್ ಪೊಟಾಷಿಯಂ ಹಾಗು 24.6ಪಿಪಿಎಮ್ ಸೋಡಿಯಂ ಇರುತ್ತದೆ.

ಕೇರಳದ ಕರಾವಳಿಯ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಮತ್ತು ತಮಿಳು ನಾಡಿನಲ್ಲಿರುವ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರವಾದ ಅಲೀಯಾರ್‌ನಗರ ಹಾಗು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ತೋರಿದ ಉತ್ತಮ ಇಳುವರಿಯ ಆಧಾರದ ಮೇರೆಗೆ ವಾಣಿಜ್ಯ ಕೃಷಿಗಾಗಿ 2007ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹದಿನೆಂಟನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಈ ತಳಿಯನ್ನು ಕೇರಳ, ತಮಿಳು ನಾಡು ಹಾಗು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಶಿಫಾರಸು ಮಾಡಲಾಗಿದೆ. ನಂತರದಲ್ಲಿ ಕೇಂದ್ರ ಬೆಳೆಗಳ ಗುಣಮಟ್ಟದ ಉಪಸಮಿತಿಯ ಅಧಿಸೂಚನೆ ಹಾಗು ಪ್ರಕಟಣೆಯಲ್ಲಿ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ)ವು ಕಲ್ಪ ಧೇನು ತಳಿಯನ್ನು ಅಧಿಸೂಚನೆ ನಂಬ್ರ ಎಸ್.ಒ. 1714 (ಇ), ದಿನಾಂಕ 18 ಜುಲೈ, 2008ರ ಪ್ರಕಾರ ಬಿಡುಗಡೆಗೊಳಿಸಿದೆ.



**ಕಲ್ಪ ಧೇನು**

## 2.5. ಕಲ್ಪ ಮಿತ್ರ

ಕಲ್ಪ ಮಿತ್ರ ತಳಿಯು ಜಾವ ಎತ್ತರ (IND 022) ತಳಿಯಿಂದ ಆಯ್ದು ಅಭಿವೃದ್ಧಿಪಡಿಸಿರುವ, ಅಧಿಕ ಇಳುವರಿ ಕೊಡುವಂತಹ ಮತ್ತು ಸ್ವಲ್ಪ ಮಟ್ಟಿಗೆ ಬರ ಸಹಿಷ್ಣುತೆ ಶಕ್ತಿಯನ್ನು ಹೊಂದಿರುವ ತಳಿ. ಈ ತಳಿಯ ಮರಗಳು ಎತ್ತರವಾಗಿದ್ದು ದಪ್ಪ ಕಾಂಡ, ಗೋಲಾಕೃತಿಯ ಮೇಲ್ಛಾವಣಿಯ ಜೊತೆಗೆ ಹೆಚ್ಚಿನ ಸಂಖ್ಯೆಯ ಎಲೆಗಳನ್ನು ಹೊಂದಿರುತ್ತವೆ. ಮರಗಳು ಪ್ರತೀ ವರ್ಷ ಇಳುವರಿಯನ್ನು ಕೊಡುವಂತವುಗಳಾಗಿದ್ದು ಮಳೆಯಾಧಾರಿತ ಪ್ರದೇಶಗಳಲ್ಲಿ ನಾಟಿ ಮಾಡಿದ 6-8 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಕಾಯಿಗಳು ದೊಡ್ಡದಾಗಿದ್ದು, ಮೊಟ್ಟೆಯಾಕಾರವನ್ನು ಹೊಂದಿದ್ದು, ಹಳದಿ ಮಿಶ್ರಿತ ಹಸಿರು ಬಣ್ಣದಿಂದ ಕೂಡಿರುತ್ತವೆ. ಈ ತಳಿಯ ಬೀಜದ ಕಾಯಿಗಳು ನಿಧಾನ ಗತಿಯಲ್ಲಿ ಮೊಳಕೆಯೊಡೆಯುವಂತವುಗಳಾಗಿದ್ದು ಶೇ. 50ರಷ್ಟು ಕಾಯಿಗಳು ಮೊಳಕೆಯೊಡೆಯಲು ಸುಮಾರು 164 ದಿನಗಳು ಬೇಕಾಗುತ್ತವೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಈ ತಳಿಯು ಒಂದು ವರ್ಷಕ್ಕೆ ಹೆಕ್ಟೇರಿಗೆ 3.37 ಟನ್ ಕೊಬ್ಬರಿ; 2.24 ಟನ್ ಎಣ್ಣೆ; 13973 ಕಾಯಿಗಳನ್ನು ಕೊಡುತ್ತದೆ. ಈ ತಳಿಯು ಪಶ್ಚಿಮ ಕರಾವಳಿ ಎತ್ತರ ತಳಿಗಿಂತ ಅನುಕ್ರಮವಾಗಿ ಶೇ. 16.01 ಹೆಚ್ಚಿನ ಕೊಬ್ಬರಿ ಮತ್ತು ಶೇ. 13.45 ಹೆಚ್ಚಿನ ಎಣ್ಣೆಯ ಇಳುವರಿಯನ್ನು ಕೊಡುತ್ತದೆಯೆಂದು ಕಂಡುಕೊಳ್ಳಲಾಗಿದೆ. ಈ ತಳಿಯು ಪ್ರತೀ ಹೆಕ್ಟೇರಿಗೆ ಸರಾಸರಿ 22429 ಕಾಯಿಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದ್ದು ಇವುಗಳಿಂದ 3.60 ಟನ್ ನಷ್ಟು ಎಣ್ಣೆಯನ್ನು ಹೊಂದಿರುವ 5.41 ಟನ್ ಕೊಬ್ಬರಿಯನ್ನು ಉತ್ಪಾದಿಸಬಹುದೆನ್ನಲಾಗಿದೆ.

ಈ ತಳಿಯ ಕಾಯಿಯ ಸರಾಸರಿ ತೂಕ 1001.19ಗ್ರಾಂ. ಇದ್ದು, ಸರಾಸರಿ 241.14ಗ್ರಾಂ. ಕೊಬ್ಬರಿ ಮತ್ತು ಕೊಬ್ಬರಿಯಲ್ಲಿ ಶೇ. 66.50ರಷ್ಟು ಎಣ್ಣೆಯಂಶವಿರುತ್ತದೆ. ಎಣ್ಣೆ ಶೇ. 47.88ರಷ್ಟು ಲೌರಿಕ್ ಆಮ್ಲವನ್ನು ಹೊಂದಿರುತ್ತದೆ. ಒಂದು ಎಳೆಕಾಯಿಯಲ್ಲಿ ಸುಮಾರು 495ಮಿ.ಲೀ. ನೀರಿರುತ್ತದೆ. ಇಂದ್ರಿಯಗಳ ಮೇಲಿನ ಪರಿಣಾಮ ಉಂಟು ಮಾಡುವ ಆಧಾರದ ಮೇಲೆ ನಡೆದ ಮೌಲ್ಯಮಾಪನದ ಪ್ರಕಾರ (ಆರ್ಗ್ಯಾನೋಲೆಪ್ಟಿಕ್) ಈ ಎಳನೀರನ್ನು ರುಚಿಯಲ್ಲಿ 'ಸಾಧಾರಣ' ವೆಂದು ವರ್ಗೀಕರಿಸಲಾಗಿದೆ. ಕಲ್ಪ ಮಿತ್ರ ತಳಿಯ 100ಮಿ.ಲೀ. ಎಳನೀರಿನಲ್ಲಿ 5.7ಗ್ರಾಂ ಒಟ್ಟು ಸಕ್ಕರೆ, 1.3ಮಿ.ಗ್ರಾಂ ಅಮೀನೋ ಆಮ್ಲಗಳು, 2150ಪಿಪಿಎಮ್ ಪೊಟಾಷಿಯಂ ಮತ್ತು 23.5ಪಿಪಿಎಮ್ ಸೋಡಿಯಂ ಇರುತ್ತದೆ.

ಕೇರಳದ ಕರಾವಳಿಯ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಮತ್ತು ಪಶ್ಚಿಮ ಬಂಗಾಳ ರಾಜ್ಯದಲ್ಲಿರುವ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರವಾದ ಮೋಂಡೌರಿಯಲ್ಲಿ ತೋರಿದ ಉತ್ತಮ ಇಳುವರಿಯ ಆಧಾರದ ಮೇರೆಗೆ ವಾಣಿಜ್ಯ ಕೃಷಿಗಾಗಿ 2007ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ

ಹದಿನೆಂಟನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಈ ತಳಿಯನ್ನು ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ ಶಿಫಾರಸು ಮಾಡಲಾಗಿದೆ. ನಂತರದಲ್ಲಿ ಕೇಂದ್ರೀಯ ಬೆಳೆಗಳ ಗುಣಮಟ್ಟದ ಉಪಸಮಿತಿಯ ಅಧಿಸೂಚನೆ ಹಾಗು ಪ್ರಕಟಣೆಯಲ್ಲಿ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ)ವು ಕಲ್ಪ ಮಿತ್ರ ತಳಿಯನ್ನು ಅಧಿಸೂಚನೆ ನಂಬ್ರ ಎಸ್.ಒ. 1714 (ಇ), ದಿನಾಂಕ 18 ಜುಲೈ, 2008ರ ಪ್ರಕಾರ ಬಿಡುಗಡೆಗೊಳಿಸಿದೆ.



**ಕಲ್ಪ ಮಿತ್ರ**

## 2.6. ಕಲ್ಪ ತರು

ಕಲ್ಪ ತರು ತಳಿಯು ಕರ್ನಾಟಕದ ಜನಪ್ರಿಯ ತಳಿಯಾಗಿರುವ ತಿಪಟೂರ್ ಎತ್ತರ ತೆಂಗಿನ ಸಮೂಹದಿಂದ ಅಧಿಕ ಇಳುವರಿ ಕೊಡುವ ಮರಗಳನ್ನು ಆಯ್ದು ಅಭಿವೃದ್ಧಿಪಡಿಸಿರುವ, ಅಧಿಕ ಇಳುವರಿ ಕೊಡುವಂತಹ ತಳಿ. ಈ ತಳಿಯ ಮರಗಳು ಎತ್ತರವಾಗಿದ್ದು, ವೃತ್ತಾಕಾರದ ಚೆಂಡೆಯನ್ನು ಹೊಂದಿದ್ದು, ಪ್ರತೀ ವರ್ಷ ಇಳುವರಿಯನ್ನು ಕೊಡುತ್ತವೆ ಮತ್ತು ಅನುಕೂಲಕರ ಪರಿಸ್ಥಿತಿಗಳಲ್ಲಿ ಸುಮಾರು 80 ವರ್ಷಗಳ ಆರ್ಥಿಕ ಆಯಸ್ಸನ್ನು ಹೊಂದಿರುತ್ತವೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಸರಾಸರಿ 6 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಕಾಯಿಗಳು ಮೊಟ್ಟೆಯಾಕಾರವನ್ನು ಹೊಂದಿದ್ದು ಸಿಪ್ಪೆ ಸುಲಿದ ಕಾಯಿಗಳು ದುಂಡಾಗಿರುತ್ತವೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಈ ತಳಿಯ ಮರವು ವರ್ಷಕ್ಕೆ ಸರಾಸರಿ 117 ಕಾಯಿಗಳನ್ನು ಕೊಡುತ್ತದೆ. ವರ್ಷಕ್ಕೆ ಹೆಕ್ಟೇರಿಗೆ 3.59 ಟನ್ ಕೊಬ್ಬರಿ ಮತ್ತು 2.45 ಟನ್ ಎಣ್ಣೆಯ ಇಳುವರಿಯನ್ನು ಕೊಡುತ್ತದೆಯೆಂದು ಅಂದಾಜು ಮಾಡಲಾಗಿದೆ. ಈ ತಳಿಯು ಸ್ವಲ್ಪ ಮಟ್ಟಿಗೆ ಬರ ಸಹಿಷ್ಣುತೆ ಗುಣವನ್ನು ಹೊಂದಿದ್ದು, ಮಳೆಯಾಧಾರಿತ ಮತ್ತು ನೀರಾವರಿ, ಎರಡೂ ಪರಿಸ್ಥಿತಿಗಳಿಗೆ ಸೂಕ್ತವಾಗಿದೆ.

ಈ ತಳಿಯ ಕಾಯಿಯ ಸರಾಸರಿ ತೂಕ 958ಗ್ರಾಂ. ಇದ್ದು, ಸರಾಸರಿ 172ಗ್ರಾಂ. ಕೊಬ್ಬರಿ ಮತ್ತು ಕೊಬ್ಬರಿಯಲ್ಲಿ ಶೇ. 67.2ರಷ್ಟು ಎಣ್ಣೆಯಂಶವಿರುತ್ತದೆ. ಒಂದು ಟನ್ ಕೊಬ್ಬರಿಗೆ ಸರಿಸುಮಾರು 5600-

6800 ಕಾಯಿಗಳು ಬೇಕಾಗುತ್ತವೆ. ಎಣ್ಣೆ ಶೇ. 44.7ರಷ್ಟು ಲೌರಿಕ್ ಆಮ್ಲವನ್ನು ಹೊಂದಿರುತ್ತದೆ. ಎಳನೀರು ರುಚಿಯಲ್ಲಿ 'ಉತ್ತಮ' ಗುಣಮಟ್ಟದ್ದಾಗಿದ್ದು ಒಂದು ಎಳೆಕಾಯಿಯಲ್ಲಿ ಸುಮಾರು 265ಮಿ.ಲೀ. ನೀರಿರುತ್ತದೆ. ಕಲ್ಪ ತರು ತಳಿಯ 100ಮಿ.ಲೀ. ಎಳನೀರಿನಲ್ಲಿ 5ಗ್ರಾಂ ಒಟ್ಟು ಸಕ್ಕರೆ, 2.9ಮಿ.ಗ್ರಾಂ ಅಮೀನೋ ಆಮ್ಲಗಳು, 3200ಪಿಪಿಎಮ್ ಪೊಟಾಷಿಯಮ್, 60ಪಿಪಿಎಮ್ ಸೋಡಿಯಮ್ ಇರುತ್ತದೆ. ಬಿಡುಗಡೆಗೊಳಿಸಿದ ಇನ್ನಿತರೆ ತಳಿಗಳಿಗೆ ಹೋಲಿಸಿದರೆ ಚೆಂಡು ಕೊಬ್ಬರಿ ತಯಾರಿಸುವಾಗ ಕೇವಲ ಶೇ. 3.92ರಷ್ಟು ಮಾತ್ರ ಹಾಳಾಗುವುದರಿಂದ ವಿಶೇಷವಾಗಿ ಈ ತಳಿಯು ಚೆಂಡು ಕೊಬ್ಬರಿ ಉತ್ಪಾಧನೆಗೂ ಸೂಕ್ತವಾಗಿದೆ.

ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕರ್ನಾಟಕದ ಅರಸೀಕೆರೆ, ಕೇರಳದ ಕರಾವಳಿಯ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಮತ್ತು ತಮಿಳು ನಾಡಿನ ಅಲೀಯಾರ್‌ನಗರ್ ಕೇಂದ್ರಗಳಲ್ಲಿ ತೋರಿದ ಉನ್ನತ ಕಾರ್ಯಕ್ಷಮತೆಯ ಆಧಾರದ ಮೇರೆಗೆ 2009ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹತ್ತೊಂಬತ್ತನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಈ ತಳಿಯನ್ನು ಕರ್ನಾಟಕ, ತಮಿಳು ನಾಡು ಮತ್ತು ಕೇರಳ ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ.



**ಕಲ್ಪ ತರು**

## 2.7. ಕೇರ ಕೇರಳಮ್

ಈ ತಳಿಯನ್ನು ಪಶ್ಚಿಮ ಕರಾವಳಿ ಎತ್ತರ ತೆಂಗಿನ ವಂಶವಾಹಿನಿಯಿಂದ (IND 069) ಆರಿಸಿ ಅಭಿವೃದ್ಧಿಪಡಿಸಲಾಗಿದೆ. ಪಶ್ಚಿಮ ಕರಾವಳಿ ಎತ್ತರ ತಳಿಯು ಭಾರತ ದೇಶದ ಪಶ್ಚಿಮ ಕರಾವಳಿ ಪ್ರದೇಶದುದ್ದಕ್ಕೂ ವ್ಯಾಪಕವಾಗಿ ಬೆಳೆಯುವ ಸರ್ವೇಸಾಮಾನ್ಯ ಎತ್ತರ ತಳಿ. ಈ ತಳಿಯ ಮರಗಳು ಗಟ್ಟಿಮುಟ್ಟಾಗಿದ್ದು ದಟ್ಟವಾದ ಗೋಲಾಕಾರದ ಚೆಂಡೆಯನ್ನು ಹೊಂದಿರುತ್ತವೆ ಮತ್ತು 75 ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಕಾಲ ಆರ್ಥಿಕ ಇಳುವರಿಯನ್ನು ನೀಡುತ್ತವೆ. ಸಂಪೂರ್ಣವಾಗಿ ಬೆಳೆದಿರುವ,

27 ರಿಂದ 30 ವರ್ಷ ವಯಸ್ಸಿನ ಮರಗಳು ಸರಾಸರಿ 36 ಕ್ರಿಯಾತ್ಮಕ ಎಲೆಗಳ ಜೊತೆಗೆ ಗೋಲಾಕಾರ ಅಥವಾ ಅರ್ಧಗೋಲಾಕಾರದ ಮೇಲ್ಕಟ್ಟನ್ನು ಹೊಂದಿರುತ್ತವೆ. ಈ ತಳಿಯ ಮರಗಳು ಪ್ರತೀ ವರ್ಷ ಇಳುವರಿಯನ್ನು ಕೊಡುವಂತವುಗಳಾಗಿದ್ದು ವರ್ಷಕ್ಕೆ ಮರವೊಂದಕ್ಕೆ ಸುಮಾರು 12 ರಿಂದ 13 ಹೂ ಗೊಂಚಲುಗಳನ್ನು ಕೊಡುತ್ತವೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಪಶ್ಚಿಮ ಕರಾವಳಿ ಎತ್ತರ ತಳಿಯ ಮರಗಳು ಸಾಮಾನ್ಯವಾಗಿ 6-7 ವರ್ಷಗಳಲ್ಲಿ ಇಳುವರಿಯನ್ನು ಕೊಡಲಾರಂಭಿಸುತ್ತವೆ. ಆದರೆ, ನೀರಾವರಿ ವ್ಯವಸ್ಥೆ ಮತ್ತು ಸಾಕಾಷ್ಟು ಸೂರ್ಯನ ಬೆಳಕು ದೊರೆಯುವಂತಹ ಅನುಕೂಲಕರ ವಾತಾವರಣಗಳಲ್ಲಿ ಬೇಗನೆ ಅಂದರೆ ನಾಲ್ಕು ವರ್ಷಗಳೊಳಗಾಗಿ ಹೂ ಬಿಡುತ್ತವೆಯೆಂದು ದಾಖಲಾಗಿದೆ. ಮಳೆಯಾಧಾರಿತ ಪ್ರದೇಶಗಳಲ್ಲಿ ವರ್ಷಕ್ಕೆ ಒಂದು ಮರದಿಂದ ಸಾರಾಸರಿ 80 ಕಾಯಿಗಳು ದೊರೆಯುತ್ತವೆ.

ಈ ತಳಿಯ ಕಾಯಿ 800-900ಗ್ರಾಂ. ತೂಕವಿದ್ದು, ಒಂದು ಕಾಯಿಯಲ್ಲಿ 176ಗ್ರಾಂ. ಕೊಬ್ಬರಿ ಮತ್ತು ಶೇ. 68ರಷ್ಟು ಎಣ್ಣೆಯನ್ನು ಹೊಂದಿರುತ್ತದೆ. ಈ ತಳಿಯ ಎಣ್ಣೆ ಶೇ. 44.1ರಷ್ಟು ಲೌರಿಕ್ ಆಮ್ಲವನ್ನು ಹೊಂದಿರುತ್ತದೆ. ಚೆಂಡು ಕೊಬ್ಬರಿ ತಯಾರಿಸುವಾಗ ಕೇವಲ ಶೇ. 9.09ರಷ್ಟು ಮಾತ್ರ ಹಾಳಾಗುವುದರಿಂದ ಈ ತಳಿಯ ಕಾಯಿಗಳನ್ನು ಚೆಂಡು ಕೊಬ್ಬರಿ ಉತ್ಪಾದನೆಗೂ ಉಪಯೋಗಿಸಬಹುದಾಗಿದೆ. ಪಶ್ಚಿಮ ಕರಾವಳಿ ಎತ್ತರ ತಳಿಯ ಕಾಯಿಯ ಸಿಪ್ಪೆ ಉತ್ತಮ ಗುಣಮಟ್ಟದ್ದಾಗಿರುವುದರಿಂದ ಇದನ್ನು ನಾರು ಮತ್ತು ನಾರಿನ ಉತ್ಪನ್ನಗಳನ್ನು ಮಾಡಲು ವ್ಯಾಪಕವಾಗಿ ಉಪಯೋಗಿಸಿಕೊಳ್ಳಬಹುದು. ಈ ತಳಿಯ ಮರಗಳು ಉತ್ತಮ ಗುಣಮಟ್ಟದ ಮತ್ತು ಪ್ರಮಾಣದ ಕಲ್ಪರಸ ಇಳುವರಿಯನ್ನು ಕೊಡುವುದರಿಂದ ಇದನ್ನು ತೆಂಗಿನ ಬೆಲ್ಲ ಅಥವಾ ಸಕ್ಕರೆಯಾಗಿ ಪರಿವರ್ತಿಸಬಹುದು.

ಪಶ್ಚಿಮ ಕರಾವಳಿ ಎತ್ತರ ತಳಿಯ ಮರಗಳು ಎಲ್ಲಾ ರೀತಿಯ ಮಣ್ಣುಗಳಲ್ಲಿ ಉತ್ತಮವಾಗಿ ಬೆಳೆಯುತ್ತವೆ ಮತ್ತು ಸ್ವಲ್ಪ ಮಟ್ಟಿಗೆ ಬರ ಸಹಿಷ್ಣುತೆ ಗುಣವನ್ನು ಹೊಂದಿವೆ. ಭಾ.ಕೃ.ಸಂ.ಪ.– ಸಿ.ಪಿ.ಸಿ.ಆರ್.ಐ.ನಿಂದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಅಲೀಯಾರ್‌ನಗರ, ವೆಪ್ಪನ್ಕುಲಂ ಮತ್ತು ಮೋಂಡೌರಿ ಕೇಂದ್ರಗಳಿಗೆ ಒದಗಿಸಲ್ಪಟ್ಟ ಪಶ್ಚಿಮ ಕರಾವಳಿ ಎತ್ತರ ತಳಿಯ ಉನ್ನತ ಕಾರ್ಯಕ್ಷಮತೆಯ ಆಧಾರದ ಮೇರೆಗೆ 2007ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹದಿನೆಂಟನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಕೇರ ಕೇರಳಮ್ ತಳಿಯನ್ನು ತಮಿಳು ನಾಡು, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ವಾಣಿಜ್ಯ ಕೃಷಿಗಾಗಿ ಶಿಫಾರಸು ಮಾಡಲಾಗಿದೆ. ನಂತರದಲ್ಲಿ ಕೇಂದ್ರೀಯ ಬೆಳೆಗಳ ಗುಣಮಟ್ಟದ ಉಪಸಮಿತಿಯ ಅಧಿಸೂಚನೆ ಹಾಗು ಪ್ರಕಟಣೆಯಲ್ಲಿ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ) ವು

ಪಶ್ಚಿಮ ಕರಾವಳಿ ಎತ್ತರ ತಳಿಯನ್ನು ಅಧಿಸೂಚನೆ ನಂಬ್ರ ಎಸ್.ಓ. 1979 (ಇ), ದಿನಾಂಕ 12 ಆಗಸ್ಟ್, 2010ರ ಪ್ರಕಾರ ತಮಿಳು ನಾಡು, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ ಬಿಡುಗಡೆಗೊಳಿಸಿದೆ.



**ಕೇರ ಕೇರಳಮ್**

## 2.8. ಕಲ್ಪ ಹರಿತ

ಕಲ್ಪ ಹರಿತ ತಳಿಯು ಎತ್ತರ ತಳಿಯಾಗಿದ್ದು ತಮಿಳುನಾಡಿನ ಕುಲಸೇಕರಮ್ ಪ್ರದೇಶದಿಂದ ಸಂಗ್ರಹಿಸಿ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು (ಭಾ.ಕೃ.ಸಂ.ಪ.)–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ಸಂರಕ್ಷಿಸಲಾಗಿರುವ ಕುಲಸೇಕರಮ್ ಹಸಿರು ಗಿಡ್ಡ (IND 045) ತೆಂಗಿನ ವಂಶವಾಹಿನಿಯಿಂದ ಆರಿಸಲಾಗಿದೆ. ಈ ತಳಿಯನ್ನು ಸುಮಾರು 50 ವರ್ಷಗಳ ಕಾಲ ಮಳೆಯಾಧಾರಿತ ಪರಿಸ್ಥಿತಿಗಳಲ್ಲಿ ಮೌಲ್ಯಮಾಪನ ಮಾಡಲಾಗಿದ್ದು ಪ್ರಸ್ತುತ ತಳಿಯನ್ನು ಹೆಚ್ಚಿನ ಇಳುವರಿ ಮತ್ತು ಎಳೆನೀರು ಗುಣಗಳ ಉತ್ತಮ ಪ್ರದರ್ಶನಕ್ಕಾಗಿ ಆಯ್ಕೆಮಾಡಲಾಗಿದೆ. ಈ ತಳಿಯು ಮಳೆಯಾಧಾರಿತ ಪ್ರದೇಶಗಳಲ್ಲಿ ವರ್ಷದಲ್ಲಿ ಮರವೊಂದಕ್ಕೆ ಸರಾಸರಿ 118 ಕಾಯಿಗಳು, ಪ್ರತೀ ಹೆಕ್ಟೇರಿಗೆ 3.72 ಟನ್ ಕೊಬ್ಬರಿ ಮತ್ತು ಹೆಕ್ಟೇರಿಗೆ 2.47 ಟನ್ ಎಣ್ಣೆಯನ್ನು ಕೊಡುತ್ತದೆ. ಈ ಅತ್ಯುತ್ತಮ ತಳಿಯು ಅಧಿಕ ಇಳುವರಿ ಅಂದರೆ ವರ್ಷದಲ್ಲಿ ಮರವೊಂದಕ್ಕೆ ಸರಾಸರಿ 208 ಕಾಯಿಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದ್ದು, ಪ್ರತೀ ಹೆಕ್ಟೇರಿಗೆ 4.3 ಟನ್ ಗಳಷ್ಟು ಎಣ್ಣೆಯನ್ನು ಕೊಡಬಲ್ಲ 6.56 ಟನ್ ಕೊಬ್ಬರಿಯನ್ನು ಉತ್ಪಾದಿಸುವುದರಿಂದ ತೆಂಗಿನ ಉತ್ಪಾದಕತೆಯನ್ನು ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ಹೇಳಲಾಗಿದೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಪಶ್ಚಿಮ ಕರಾವಳಿ ಎತ್ತರ ತಳಿಗಿಂತ ಹೆಕ್ಟೇರಿಗೆ ಶೇ. 48ರಷ್ಟು ಹೆಚ್ಚಿನ ಕಾಯಿಗಳು, ಶೇ. 54ರಷ್ಟು ಹೆಚ್ಚಿನ ಕೊಬ್ಬರಿ ಮತ್ತು ಶೇ. 50ಕ್ಕಿಂತ ಹೆಚ್ಚಿನ ಎಣ್ಣೆಯ ಇಳುವರಿಯನ್ನು ಕೊಡುತ್ತದೆಯೆಂದು ತಿಳಿದುಕೊಳ್ಳಲಾಗಿದೆ.

ಈ ತಳಿಯ ಮರಗಳು ಎತ್ತರವಾಗಿದ್ದು ಕಾಂಡದ ಕೆಳಭಾಗದಲ್ಲಿ ಅಲ್ಪ ಸ್ವಲ್ಪ ಬುಡವನ್ನು ಹೊಂದಿರುತ್ತವೆ. ನೆಟ್ಟ 50 ವರ್ಷಗಳಲ್ಲಿ ಸರಾಸರಿ 13.8ಮೀ. ನಷ್ಟು ಎತ್ತರ ಬೆಳೆಯುತ್ತವೆ. ಈ ತಳಿಯ ಕಾಯಿಗಳು ಸಹಾ ಹಸಿರು ಬಣ್ಣವನ್ನು ಹೊದಿದ್ದು, ಮೊಟ್ಟೆಯಾಕಾರದಲ್ಲಿದ್ದು ಸುಲಿದ/ಸಿಪ್ಪೆ ತೆಗೆದ ಕಾಯಿಗಳು ದುಂಡಾಗಿರುತ್ತವೆ. ಈ ತಳಿಯ ಮರಗಳು ಪ್ರತೀ ವರ್ಷ ಇಳುವರಿಯನ್ನು ಕೊಡುವಂತವುಗಳಾಗಿದ್ದು, 45 ತಿಂಗಳುಗಳಲ್ಲಿ ಹೂ ಬಿಡಲು ಪ್ರಾರಂಭಿಸಿ ಸರಾಸರಿ 50 ತಿಂಗಳುಗಳಲ್ಲಿ ಶೇ. 50ರಷ್ಟು ಮರಗಳು ಹೂ ಬಿಡುತ್ತವೆ. ಕಲ್ಪ ಹರಿತ ತಳಿಯು ನುಸಿ ಕೀಟದ ಹಾವಳಿಯನ್ನು ಸ್ವಲ್ಪಮಟ್ಟಿಗೆ ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ.

ಒಂದು ಎಳನೀರಿನಲ್ಲಿ ಸರಾಸರಿ 440ಮಿ.ಲೀ. ನಷ್ಟು ನೀರಿದ್ದು ರುಚಿಯ ಅನುಸಾರ 'ಅತ್ಯುತ್ತಮ'ವೆಂದು ಪರಿಗಣಿಸಲಾಗಿದ್ದು, ಒಟ್ಟು ಸಕ್ಕರೆಯಂಶ 5.85°ಬ್ರಿಕ್ಸ್ ನಷ್ಟಿದೆ. ಪ್ರತೀ 100ಮಿ.ಲೀ. ಎಳನೀರಿನಲ್ಲಿ 17.5ಪಿಪಿಯಂ ಸೋಡಿಯಮ್ ಹಾಗೂ 2100ಪಿಪಿಯಂ ಪೊಟಾಸಿಯಂ ಇರುತ್ತದೆ. ಕಲ್ಪ ಹರಿತ ತಳಿಯ ಒಂದು ಕಾಯಿಯ ಸರಾಸರಿ ತೂಕ 914ಗ್ರಾಂ. ಒಂದು ಕಾಯಿಯಲ್ಲಿ ಕೊಬ್ಬರಿ ಅಂಶ 216ಗ್ರಾಂ. ಮತ್ತು ಕೊಬ್ಬರಿಯಲ್ಲಿ ಎಣ್ಣೆಯಂಶ ಶೇ. 66.5ರಷ್ಟಿರುತ್ತದೆ.

ಮಳೆಯಾಧಾರಿತ ಪ್ರದೇಶಗಳಲ್ಲಿ ಪಶ್ಚಿಮ ಕರಾವಳಿ ಎತ್ತರ ತಳಿಗಿಂತ ಅಧಿಕ ಇಳುವರಿಯನ್ನು ಪ್ರದರ್ಶಿಸಿದ್ದರಿಂದ ಕಲ್ಪ ಹರಿತ ತಳಿಯನ್ನು ಸ್ವಲ್ಪ ಮಟ್ಟಿಗೆ ನೀರಿನ ಕೊರತೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆಯೆಂದು ವಿಂಗಡಿಸಲಾಗಿದೆ. ಕೇರಳದ ಕರಾವಳಿಯ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಮತ್ತು ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಸಂಶೋಧನಾ ಕೇಂದ್ರ ಕರ್ನಾಟಕದ ಕಿದುವಿನಲ್ಲಿ ತೋರಿದ ಉತ್ತಮ ಇಳುವರಿಯ ಆಧಾರದ ಮೇರೆಗೆ 2012ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಇಪ್ಪತ್ತೊಂದನೆಯ ದ್ವೈವಾರ್ಷಿಕ ಕಾರ್ಯಾಗಾರದಲ್ಲಿ ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ತೆಂಗು ಬೆಳೆಯುವ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಕೃಷಿಗಾಗಿ ಬೆಳೆಯಲು ಶಿಫಾರಸು ಮಾಡಲಾಗಿದೆ.



**ಕಲ್ಪ ಹರಿತ**

## 3. ಸಂಕರಣ ತಳಿಗಳು

ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ಅಭಿವೃದ್ಧಿಪಡಿಸಿ ವಾಣಿಜ್ಯ ಕೃಷಿಗಾಗಿ ಬಿಡುಗಡೆಗೊಳಿಸಿದ 6 ಸಂಕರಣ ತಳಿಗಳಲ್ಲಿ ಕಲ್ಪ ಸಮೃದ್ಧಿ ಮತ್ತು ಕಲ್ಪ ಶ್ರೇಷ್ಠ ಸಂಕರಣ ತಳಿಗಳನ್ನು ಕೊಬ್ಬರಿ ಮತ್ತು ಎಳನೀರು ಎರಡೂ ಉಪಯೋಗಗಳಿಗೆ ಶಿಫಾರಸು ಮಾಡಲಾಗಿದೆ. ಕಲ್ಪ ಸಮೃದ್ಧಿಯು ಸ್ವಲ್ಪ ಮಟ್ಟಿಗೆ ಬರ ಸಹಿಷ್ಣುತೆ ಶಕ್ತಿಯನ್ನು ಮತ್ತು ಹೆಚ್ಚಿನ ಪೋಷಕಾಂಶ ಬಳಸಿಕೊಳ್ಳುವ ದಕ್ಷತೆಯನ್ನು ಹೊಂದಿದೆ. ಕಲ್ಪ ಸಂಕರವು ತೆಂಗಿನ ಬೇರು ಸೊರಗು ರೋಗವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿರುವುದರಿಂದ ನಮ್ಮ ದೇಶದಲ್ಲಿ ಬೇರು ಸೊರಗು ರೋಗವಿರುವ ಪ್ರದೇಶಗಳಿಗೆ ಈ ಸಂಕರಣ ತಳಿಯನ್ನು ಶಿಫಾರಸು ಮಾಡಲಾಗಿದೆ. ಇದಲ್ಲದೆ, LCGD x LCT, LCOD x LCT ಸಂಕರಣ ತಳಿಗಳು ಲಕ್ಷದ್ವೀಪಗಳಲ್ಲಿ ಬೆಳೆಯಲು ಸೂಕ್ತ ಉನ್ನತ ಸಂಕರಣಗಳೆಂದು ಗುರುತಿಸಲಾಗಿದ್ದು, COD x WAT, COD x LCT ಹಾಗೂ MYD x EAT32 ಸಂಕರಣಗಳು ಕೇರಳ ರಾಜ್ಯದಲ್ಲಿ ಬೆಳೆಯಲು ಸೂಕ್ತ ಉತ್ಕೃಷ್ಟ ತಳಿಗಳೆಂದು ಶಿಫಾರಸು ಮಾಡಲಾಗಿದೆ.

### 3.1. ಚಂದ್ರ ಸಂಕರ

ಚಂದ್ರ ಸಂಕರ ಸಂಕರಣ ತಳಿಯು ವಾಣಿಜ್ಯ ಕೃಷಿಗಾಗಿ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. 1985ರಲ್ಲಿ ಅಭಿವೃದ್ಧಿಪಡಿಸಿ ಶಿಫಾರಸು ಮಾಡಿದ ಮೊಟ್ಟಮೊದಲ ಮತ್ತು ಅತ್ಯಂತ ಜನಪ್ರಿಯ ಕುಬ್ಜ x ಎತ್ತರ ಸಂಕರಣ ತಳಿ. ಇದು ಚೌಘಾಟ್ ಕಿತ್ತಳೆ ಗಿಡ್ಡ ತಳಿ (ತಾಯಿ ಮರ) ಹಾಗು ಉತ್ಕೃಷ್ಟ ಜಾತಿಯ ಪಶ್ಚಿಮ ಕರಾವಳಿ ಎತ್ತರ ತಳಿಯ (ಗಂಡು/ ಪರಾಗ ಮರ) ನಡುವಿನ ಸಂಕರಣ. ಪಶ್ಚಿಮ ಕರಾವಳಿ ಎತ್ತರ ತಳಿಯ ಮರಗಳಿಗೆ ಹೋಲಿಸಿದರೆ ಈ ಸಂಕರಣ ತಳಿಯು ಬಹಳ ಬೇಗ ಇಳುವರಿಯನ್ನು ನೀಡುತ್ತದೆ. ಮರಗಳು ಮಧ್ಯಮ ಎತ್ತರವಿದ್ದು, ವರ್ತುಲಾಕಾರದ ಮೇಲ್ಕಟ್ಟನ್ನು ಹೊಂದಿವೆ. ಬೆಳೆಯುವ ಪ್ರದೇಶಗಳು ಅನುಕೂಲಕರವಾಗಿದ್ದಲ್ಲಿ ಸಾಮಾನ್ಯವಾಗಿ 3-4 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ತೆಂಗಿನ ಕಾಯಿಗಳು ದುಂಡಾಗಿದ್ದು, ಕಂದು ಬಣ್ಣವನ್ನು ಹೊಂದಿರುತ್ತವೆ. ಈ ತಳಿಯು ಉತ್ತಮ ಇಳುವರಿಯದ್ದಾಗಿದ್ದು, ಪ್ರತೀ ವರ್ಷಕ್ಕೆ ಪ್ರತೀ ಮರಕ್ಕೆ ಅಂದಾಜು ಸುಮಾರು 110-123 ಕಾಯಿಗಳು ದೊರೆಯುತ್ತಿದ್ದು, ಅಂದಾಜು ಪ್ರತೀ ಮರಕ್ಕೆ ಪ್ರತೀ ವರ್ಷಕ್ಕೆ 25-28ಕಿ.ಗ್ರಾಂ ಕೊಬ್ಬರಿ ಅಥವಾ ಪ್ರತೀ ಹೆಕ್ಟೇರಿಗೆ 2.99 ಟನ್ ಎಣ್ಣೆಯ ಇಳುವರಿಯನ್ನು ಕೊಡುವಂತಹ 4.40-4.82 ಟನ್ ಕೊಬ್ಬರಿ ದೊರೆಯುತ್ತದೆ. ಈ ಸಂಕರಣ ತಳಿಯ ಸಸಿಗಳು ವೇಗದ ಬೆಳವಣಿಗೆಯ ಜೊತೆಗೆ ಕಂಚಿನ ಬಣ್ಣದ ಎಲೆಯ ದಂಟುಗಳನ್ನು ಹೊಂದಿರುವುದರಿಂದ ನರ್ಸರಿ/ ಸಸ್ಯ ಕ್ಷೇತ್ರದಲ್ಲಿ ಈ ಸಂಕರಣ ತಳಿಯ ಸಸಿಗಳನ್ನು ಬಹಳ ಸುಲಭವಾಗಿ ಗುರುತಿಸಬಹುದಾಗಿದೆ.

ಈ ತಳಿಯ ತೆಂಗಿನ ಕಾಯಿಗಳು ಮಧ್ಯಮ ಗಾತ್ರದ್ದಾಗಿದ್ದು, ಸರಾಸರಿ 208-225ಗ್ರಾಂ ನಷ್ಟು ಕೊಬ್ಬರಿ ಅಂಶ ಮತ್ತು ಶೇ. 64-68ರಷ್ಟು ಎಣ್ಣೆ ಅಂಶ ಹೊಂದಿವೆ. ಚಂದ್ರ ಸಂಕರ ಸಂಕರಣ ತಳಿಯು ಬರ ಪರಿಸ್ಥಿತಿಯನ್ನು ತಾಳಿಕೊಳ್ಳದ ಕಾರಣದಿಂದ ಬೇಸಿಗೆಯಲ್ಲಿ ನೀರುಣಿಸಬೇಕು. ಈ ಸಂಕರಣ ತಳಿಯು ಉತ್ತಮ ನಿರ್ವಹಣಾ ಪ್ರದೇಶಗಳಲ್ಲಿ ಒಳ್ಳೆಯ ಫಲಿತಾಂಶ ನೀಡುತ್ತಿದ್ದು, ಮಳೆಯಾಧಾರಿತ ಪ್ರದೇಶಗಳಿಗೆ ಸೂಕ್ತವಲ್ಲ. ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರಗಳಲ್ಲಿ, ಸ್ಥಳೀಯವಾಗಿ ದೊರಕುವ ಪಶ್ಚಿಮ ಕರಾವಳಿ ಎತ್ತರ ತಳಿಯ ಮರಗಳಿಗಿಂತ ಭಾ.ಕೃ.ಸಂ.ಪ.– ಸಿ.ಪಿ.ಸಿ.ಆರ್.ಐ. ಅಭಿವೃದ್ಧಿಗೊಳಿಸಿದ ಚಂದ್ರ ಸಂಕರವು ಉತ್ತಮವಾಗಿದೆಯೆಂದು ಮನಗಂಡು 1985ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಏಳನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಕೇರಳ, ಕರ್ನಾಟಕ ಮತ್ತು ತಮಿಳು ನಾಡು ರಾಜ್ಯಗಳಲ್ಲಿ ವಾಣಿಜ್ಯ ಕೃಷಿಗಾಗಿ ಶಿಫಾರಸು ಮಾಡಲಾಗಿದೆ.



**ಚಂದ್ರ ಸಂಕರ**

## 3.2. ಚಂದ್ರ ಲಕ್ಷ

ಈ ಸಂಕರಣ ತಳಿಯು, ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ವಾಣಿಜ್ಯ ಕೃಷಿಗಾಗಿ ಶಿಫಾರಸು ಮಾಡಿದ ಮೊದಲ ಎತ್ತರ x ಕುಬ್ಜ ಸಂಕರಣ ತಳಿಯಾಗಿದ್ದು, ಲಕ್ಷದ್ವೀಪ ಸಾಮಾನ್ಯ ಎತ್ತರ ತಳಿ (ತಾಯಿ ಮರ) ಮತ್ತು ಚೌಘಾಟ್ ಕಿತ್ತಳೆ ಗಿಡ್ಡ ತಳಿ (ಗಂಡು/ ಪರಾಗ ಮರ) ನಡುವಿನ ಸಂಕರಣ. ಈ ಸಂಕರಣ ತಳಿಯ ತೆಂಗಿನ ಮರಗಳು ಎತ್ತರವಿದ್ದು, ವರ್ತುಲಾಕಾರದ ಮೇಲ್ಕಟ್ಟನ್ನು ಹೊಂದಿವೆ. ಉತ್ತಮ ಬೇಸಾಯ ಕ್ರಮಗಳನ್ನು ಅನುಸರಿಸುವ ಪ್ರದೇಶಗಳಲ್ಲಿ ನಾಟಿ ಮಾಡಿದ ನಾಲ್ಕು ವರ್ಷಗಳಲ್ಲಿ ಈ ಸಂಕರಣ ತಳಿಯು ಹೂ ಬಿಡಲು ಪ್ರಾರಂಭಿಸುತ್ತದೆ. ಪ್ರತೀ ಮರದಿಂದ ವಾರ್ಷಿಕ ಸರಾಸರಿ ಇಳುವರಿ ಸುಮಾರು 109 ಕಾಯಿಗಳು, ಪ್ರತೀ ಮರದಿಂದ ಪ್ರತೀ ವರ್ಷಕ್ಕೆ ಅಂದಾಜು 21.3ಕಿ.ಗ್ರಾಂ. ನಷ್ಟು ಕೊಬ್ಬರಿಯನ್ನು ಪಡೆಯಬಹುದಾಗಿದೆ. ಚಂದ್ರ ಲಕ್ಷ ಸಂಕರಣ ತಳಿಯು ನೀರಾವರಿ ಹಾಗು ಉತ್ತಮ ನಿರ್ವಹಣಾ ಪ್ರದೇಶಗಳಲ್ಲಿ ಒಳ್ಳೆಯ

ಇಳುವರಿ ನೀಡುತ್ತಿದ್ದು, ಪ್ರತೀ ಮರಕ್ಕೆ ಪ್ರತೀ ವರ್ಷಕ್ಕೆ ಸುಮಾರು 175 ಕಾಯಿಗಳನ್ನು ಹಾಗು ಪ್ರತೀ ಮರಕ್ಕೆ ಪ್ರತೀ ವರ್ಷಕ್ಕೆ ಅಂದಾಜು ಕೊಬ್ಬರಿ ಇಳುವರಿ 30.10ಕಿ.ಗ್ರಾಂ. ನಷ್ಟಿದ್ದು, ವರ್ಷಕ್ಕೆ ಹೇಕ್ಟೇರಿಗೆ 3.37 ಟನ್ ಎಣ್ಣೆಯನ್ನು ಪಡೆಯಬಹುದಾಗಿದೆ.

ಈ ತಳಿಯ ಕಾಯಿಗಳು ಅಂಡಾಕಾರವಿದ್ದು, ಮಧ್ಯಮ ಗಾತ್ರವನ್ನು ಹೊದಿದ್ದು, ಪ್ರತೀ ಕಾಯಿಯಲ್ಲಿ 195ಗ್ರಾಂ. ನಷ್ಟು ಕೊಬ್ಬರಿ ಇದ್ದು ಕೊಬ್ಬರಿಯಲ್ಲಿ ಶೇ. 69ರಷ್ಟು ಎಣ್ಣೆ ಅಂಶವಿರುತ್ತದೆ. ತೇವಾಂಶದ ಕೊರತೆಯಿರುವ ಪರಿಸ್ಥಿತಿಗಳಲ್ಲಿ ಈ ಸಂಕರಣ ತಳಿಯು ಚಂದ್ರ ಸಂಕರ ಹಾಗು ಕೇರ ಸಂಕರ ಸಂಕರಣ ತಳಿಗಳಿಂತ ಉತ್ತಮ ಇಳುವರಿಯನ್ನು ನೀಡುತ್ತದೆ. ಚಂದ್ರ ಲಕ್ಷ ಸಂಕರಣ ತಳಿಯನ್ನು ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು, ಭಾ.ಕೃ.ಸಂ.ಪ.– ಸಿ.ಪಿ.ಸಿ.ಆರ್.ಐ., ಕಾಸರಗೋಡು ಹಾಗು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರಗಳಾದ ಕರ್ನಾಟಕದ ಅರಸೀಕೆರೆ ಮತ್ತು ತಮಿಳು ನಾಡಿನ ವೆಪ್ಪಂಕುಳಂನಲ್ಲಿನ ಉತ್ತಮ ಪ್ರದರ್ಶನಕ್ಕಾಗಿ 1985ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಏಳನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಕೇರಳ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಗಾಗಿ ಬಿಡುಗಡೆಮಾಡಿದೆ.



**ಚಂದ್ರ ಲಕ್ಷ**

### 3.3. ಕೇರ ಸಂಕರ

ಇದು ಚೌಘಾಟ್ ಕಿತ್ತಳೆ ಗಿಡ್ಡ ತಳಿ (ಗಂಡು/ಪರಾಗ ಮರ) ಹಾಗು ಪಶ್ಚಿಮ ಕರಾವಳಿ ಎತ್ತರ ತಳಿ (ತಾಯಿ ಮರ) ನಡುವಿನ ಸಂಕರಣವಾಗಿದ್ದು, ಬಹಳ ಪ್ರಸಿದ್ಧವಾದ ಎತ್ತರ x ಗಿಡ್ಡ ಸಂಕರಣತಳಿಯಾಗಿದೆ. ಈ ಸಂಕರಣ ತಳಿಯ ಮರಗಳು ಬಹಳ ಬೇಗನೆ ಪ್ರೌಢಾವಸ್ಥೆಯನ್ನು ಹೊಂದಿ ಮೂಲ ಮರಗಳಿಗೆ ಹೋಲಿಸಿದರೆ ಹೆಚ್ಚಿನ ಉತ್ಪಾದಕತೆಯನ್ನು ನೀಡುತ್ತವೆ. ಈ ಸಂಕರಣ ತಳಿಯ ಮರಗಳು ಎತ್ತರವಾಗಿದ್ದು, ವೃತ್ತಾಕಾರದ ಮೇಲ್ಕಟ್ಟನ್ನು ಹೊಂದಿರುತ್ತವೆ. ಉತ್ತಮ ಬೇಸಾಯ ಕ್ರಮಗಳನ್ನು ಅನುಸರಿಸುವ ಪ್ರದೇಶಗಳಲ್ಲಿ, ನಾಟಿ ಮಾಡಿದ ನಾಲ್ಕನೆಯ ವರ್ಷದಲ್ಲಿ ಈ ಸಂಕರಣ

ತಳಿಯು ಹೂ ಬಿಡಲು ಪ್ರಾರಂಭಿಸುತ್ತದೆ. ವಾರ್ಷಿಕ ತೆಂಗಿನ ಕಾಯಿಯ ಇಳುವರಿಯು ಪ್ರತೀ ಮರಕ್ಕೆ 108ರಷ್ಟಿದ್ದು, ಪ್ರತೀ ಮರಕ್ಕೆ ವರ್ಷಕ್ಕೆ ಸುಮಾರು 20.2ಕಿ.ಗ್ರಾಂ ಕೊಬ್ಬರಿ ಇಳುವರಿಯನ್ನು ಕೊಡುತ್ತದೆ.

ಈ ತಳಿಯ ಕಾಯಿಗಳು ಅಂಡಾಕಾರವಿದ್ದು, ಮಧ್ಯಮ ಗಾತ್ರವನ್ನು ಹೊಂದಿರುತ್ತವೆ. ಪ್ರತೀ ಕಾಯಿಯಲ್ಲಿ 187ಗ್ರಾಂ. ನಷ್ಟು ಕೊಬ್ಬರಿ ಅಂಶವಿದ್ದು ಕೊಬ್ಬರಿಯಲ್ಲಿ ಶೇ. 68ರಷ್ಟು ಎಣ್ಣೆ ಅಂಶವಿರುತ್ತದೆ. ನೀರಾವರಿ ಹಾಗು ಉತ್ತಮ ನಿರ್ವಹಣಾ ಕ್ರಮಗಳನ್ನು ಅನುಸರಿಸುವ ಪ್ರದೇಶಗಳಲ್ಲಿ ಈ ಸಂಕರಣ ತಳಿಯು ಹೆಚ್ಚಿನ ಇಳುವರಿಯನ್ನು ನೀಡುತ್ತದೆ. ಕೇರ ಸಂಕರವು ಚಂದ್ರ ಸಂಕರ ತಳಿಗಿಂತ ಭಿನ್ನವಾಗಿದ್ದು, ಮಳೆಯಾಧಾರಿತ ಪ್ರದೇಶಗಳಲ್ಲಿಯೂ ಉತ್ತಮ ಇಳುವರಿಯನ್ನು ಕೊಡಬಲ್ಲುದಾಗಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. ಮಂಡಿಸಿದ ಈ ಸಂಕರಣ ತಳಿಯನ್ನು ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ. ಹಾಗು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರಗಳಲ್ಲಿನ ಉತ್ತಮ ಪ್ರದರ್ಶನದ ಫಲವಾಗಿ, 1991ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹತ್ತನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಕೇರಳ, ಕರಾವಳಿ ಆಂಧ್ರ ಪ್ರದೇಶ ಮತ್ತು ಕರಾವಳಿ ಮಹಾರಾಷ್ಟ್ರದ ಪ್ರದೇಶಗಳಿಗೆ ವಾಣಿಜ್ಯ ಕೃಷಿಗಾಗಿ ಶಿಫಾರಸು ಮಾಡಲಾಗಿದೆ.



**ಕೇರ ಸಂಕರ**

### 3.4. ಕಲ್ಪ ಸಮೃದ್ಧಿ

ಕಲ್ಪ ಸಮೃದ್ಧಿಯು ಉತ್ತಮ ಇಳುವರಿಯನ್ನು ನೀಡುವ ಕುಬ್ಜ x ಎತ್ತರ ಸಂಕರಣ ತಳಿಯಾಗಿದ್ದು, ಮಲಯನ್ ಹಳದಿ ಗಿಡ್ಡ (ತಾಯಿ ಮರ) ಹಾಗು ಪಶ್ಚಿಮ ಕರಾವಳಿ ಎತ್ತರ (ಗಂಡು/ಪರಾಗ ಮರ) ತಳಿಯ ನಡುವಿನ ಸಂಕರಣ. ಇದು ಕೊಬ್ಬರಿ ಮತ್ತು ಎಳನೀರು ಎರಡಕ್ಕೂ ಬೆಳೆಯಬಹುದಾದ ಸಂಕರಣ ತಳಿಯಾಗಿದೆ. ಈ ತಳಿಯ ಮರಗಳು ಮಧ್ಯಮ ಎತ್ತರವಾಗಿದ್ದು, ಒತ್ತೊತ್ತಾದ ವರ್ತುಲಾಕಾರದ ಮೇಲ್ಕಟ್ಟನ್ನು ಹೊಂದಿವೆ. ಮಳೆಯಾಧಾರಿತ ಪ್ರದೇಶಗಳಲ್ಲಿ, ನಾಟಿ ಮಾಡಿದ 5 ವರ್ಷಗಳಲ್ಲಿ ಮರಗಳು ಹೂ ಬಿಡಲು ಪ್ರಾರಂಭಿಸಿ ನಿಯತವಾಗಿ ಇಳುವರಿಯನ್ನು

ಕೊಡುತ್ತವೆ. ಆದರೆ ನೀರಾವರಿ ಪ್ರದೇಶಗಳಲ್ಲಿ, ನಾಟಿ ಮಾಡಿದ ಸುಮಾರು 3 ರಿಂದ 4 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಹಣ್ಣುಗಳು ಹಾಗು ಎಲೆಯ ದಂಟುಗಳು ತಿಳಿ ಹಸಿರು ಬಣ್ಣದಿಂದ ಕೂಡಿರುತ್ತವೆ. ಸಿಪ್ಪೆ ಸಹಿತ ತೆಂಗಿನ ಕಾಯಿಯು ಅಂಡಾಕಾರದಲ್ಲಿದ್ದು, ಸಿಪ್ಪೆ ಸುಲಿದವು ದುಂಡನೆಯಾಕಾರದಲ್ಲಿರುತ್ತವೆ. ಮಳೆಯಾಧಾರಿತ ಪ್ರದೇಶಗಳಲ್ಲಿ ಈ ತಳಿಯ ಸರಾಸರಿ ಇಳುವರಿಯು ಪ್ರತೀ ಮರಕ್ಕೆ ವರ್ಷಕ್ಕೆ 117 ಕಾಯಿಗಳು, ಹೆಕ್ಟೇರಿಗೆ ಅಂದಾಜು ಕೊಬ್ಬರಿ ಇಳುವರಿ 4.5 ಟನ್ ನಷ್ಟಿದ್ದು, ಹೆಕ್ಟೇರಿಗೆ ಎಣ್ಣೆಯ ಇಳುವರಿಯು ಅಂದಾಜು 3.04 ಟನ್ ನಷ್ಟಿದೆ. ಈ ತಳಿಯು ಈ ಹಿಂದೆ ಬಿಡುಗಡೆಗೊಳಿಸಿದ ಕುಬ್ಜ x ಎತ್ತರ ಸಂಕರಣ ತಳಿಯಾದ ಚಂದ್ರ ಸಂಕರಕ್ಕಿಂತ ಉತ್ತಮವಾಗಿದ್ದು, ವಾರ್ಷಿಕ ಅಂದಾಜು ಪ್ರತಿ ಹೆಕ್ಟೇರಿಗೆ ಕ್ರಮವಾಗಿ ಶೇ. 30.27ರಷ್ಟು ಕಾಯಿ, ಶೇ. 66.05ರಷ್ಟು ಕೊಬ್ಬರಿ ಹಾಗು ಶೇ. 73.71ರಷ್ಟು ಎಣ್ಣೆಯ ಹೆಚ್ಚಿನ ಇಳುವರಿ ನೀಡುತ್ತದೆ. ಈ ತಳಿಯ ತೆಂಗಿನ ಬೀಜಗಳು ಬೇಗನೆ ಮೊಳಕೆಯೊಡೆದು ಗಟ್ಟಿಮುಟ್ಟಾದ ಗಿಡಗಳು ಉತ್ಪತ್ತಿಯಾಗುತ್ತವೆ.

ಈ ತಳಿಯ ತೆಂಗಿನ ಕಾಯಿಯ ಸರಾಸರಿ ತೂಕವು 1032.33ಗ್ರಾಂ. ನಷ್ಟಿದ್ದು, ಸರಾಸರಿ 219.46ಗ್ರಾಂ. ನಷ್ಟು ಕೊಬ್ಬರಿಯನ್ನು ಮತ್ತು ಶೇ. 67.5ರಷ್ಟು ಕೊಬ್ಬರಿ ಎಣ್ಣೆಯನ್ನು ಹೊಂದಿರುತ್ತದೆ. ಈ ತಳಿಯ ಕೊಬ್ಬರಿಯಿಂದ ಉತ್ಪಾದಿಸಿದ ಎಣ್ಣೆಯಲ್ಲಿ ಶೇ. 45.4ರಷ್ಟು ಲೌರಿಕ್ ಆಮ್ಲವಿರುತ್ತದೆ. ಎಳನೀರು ಉತ್ತಮ ಗುಣಮಟ್ಟದ್ದಾಗಿದ್ದು (ಟಿಎಸ್‌ಎಸ್ 6°ಬ್ರಿಕ್ಸ್), ಪ್ರತಿ ಕಾಯಿಯಲ್ಲಿ ಸುಮಾರು 346ಮಿ.ಲೀ. ನಷ್ಟು ಎಳನೀರಿರುತ್ತದೆ. 100ಮಿ.ಲೀ. ಎಳನೀರಿನಲ್ಲಿ 4.17ಗ್ರಾಂ ಒಟ್ಟು ಸಕ್ಕರೆ, 2.08ಮಿ.ಗ್ರಾಂ ಉಚಿತ ಅಮ್ಯೆನೋ ಆಮ್ಲಗಳು, 2370ಪಿಪಿಎಮ್ ಪೊಟಾಷಿಯಂ ಹಾಗು 35.1ಪಿಪಿಎಮ್ ಸೋಡಿಯಂ ಇರುತ್ತದೆ.

ಚಂದ್ರ ಸಂಕರ ಸಂಕರಣ ತಳಿಗೆ ಹೋಲಿಸಿದರೆ ಕಲ್ಪ ಸಮೃದ್ಧಿಯು ನೀರಿನ ಕೊರತೆಯನ್ನು ಸಹಿಸಿಕೊಳ್ಳುವ ಗುಣವನ್ನು ಹೊಂದಿದೆ. ಅಲ್ಲದೆ ಚಂದ್ರ ಸಂಕರ ತಳಿಯ ಸಸಿಗಳಿಗೆ ಹೋಲಿಸಿದರೆ ಕಲ್ಪ ಸಮೃದ್ಧಿಯ ಸಸಿಗಳು ಸಾರಜನಕ ಬಳಸಿಕೊಳ್ಳುವಲ್ಲಿ ಹೆಚ್ಚಿನ ಕ್ಷಮತೆಯನ್ನು ಹೊಂದಿವೆಯೆಂದು ತಿಳಿದುಬಂದಿದೆ. ಕೇರಳದ ಕರಾವಳಿಯ ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಮತ್ತು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರವಾದ ಅಸ್ಸಾಮಿನ ಕಾಹಿಕುಚಿಯಲ್ಲಿ ತೋರಿದ ಉತ್ತಮ ಪ್ರದರ್ಶನದಿಂದಾಗಿ ಈ ತಳಿಯನ್ನು 2009ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಹತ್ತೊಂಬತ್ತನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ಕೇರಳ ಹಾಗು ಅಸ್ಸಾಂ ರಾಜ್ಯಗಳಿಗೆ ಶಿಫಾರಸು ಮಾಡಲಾಗಿದೆ. ಕೇಂದ್ರೀಯ ಬೆಳೆಗಳ ಗುಣಮಟ್ಟದ ಉಪಸಮಿತಿಯು 2012ರಲ್ಲಿ ತನ್ನ ಅಧಿಸೂಚನೆ ಹಾಗು ಪ್ರಕಟಣೆಯಲ್ಲಿ ಅಸ್ಸಾಂ ಹಾಗು

ಕೇರಳ ರಾಜ್ಯಗಳಿಗೆ ವಾಣಿಜ್ಯ ಕೃಷಿಗಾಗಿ ಬಿಡುಗಡೆಗೊಳಿಸಲು ಸಮ್ಮತಿಸಿದ್ದು, ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ)ವು ಅಧಿಸೂಚನೆಯನ್ನು ಕಾಯ್ದಿರಿಸಿದೆ.



**ಕಲ್ಪ ಸಮೃದ್ಧಿ**

### 3.5. ಕಲ್ಪ ಸಂಕರ

ಬೇರು (ಸೊರಗು) ರೋಗ ಭಾದಿತ ಪ್ರದೇಶಕ್ಕಾಗಿ ಅಭಿವೃದ್ಧಿಪಡಿಸಿದ ಕುಬ್ಜ x ಎತ್ತರ ತೆಂಗಿನ ಸಂಕರಣ ತಳಿಯೇ ಕಲ್ಪ ಸಂಕರ. ಇದು ಬೇರು (ಸೊರಗು) ರೋಗ ರಹಿತ ಚೌಘಾಟ್ ಕಿತ್ತಳೆ ಗಿಡ್ಡ ತಳಿ (ತಾಯಿ ಮರ) ಮತ್ತು ಬೇರು (ಸೊರಗು) ರೋಗ ರಹಿತ ಪಶ್ಚಿಮ ತೀರದ ಎತ್ತರ ತಳಿ (ಪರಾಗ/ಗಂಡು ಮರ) ಗಳ ನಡುವಿನ ಸಂಕರಣ. ಕಲ್ಪ ಸಂಕರ ಉತ್ತಮ ಇಳುವರಿ ಕೊಡುವ ಬೇರು (ಸೊರಗು) ರೋಗವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿರುವ ಸಂಕರಣ ತಳಿಯಾಗಿದ್ದು, ದೇಶದ ಬೇರು (ಸೊರಗು) ರೋಗ ಭಾದಿತ ಪ್ರದೇಶಗಳಲ್ಲಿ ಬೆಳೆಯಲು ಸೂಕ್ತ. ಈ ತಳಿಯ ಮರಗಳು ಮಧ್ಯಮ ಎತ್ತರವಿದ್ದು, ಬಹಳ ಬೇಗ ಇಳುವರಿ ನೀಡುವಂತಹವುಗಳಾಗಿವೆ. ಈ ತಳಿಯ ಮರಗಳು ನಾಟಿ ಮಾಡಿದ 3-4 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ, 18ನೆಯ ವಯಸ್ಸಿನಲ್ಲಿ ಸುಮಾರು 4.98ಮೀ. ಎತ್ತರ ಬೆಳೆಯುತ್ತವೆ. ಎಳನೀರು ಪ್ರಮಾಣ 373ಮಿ.ಲೀ. ಇದ್ದು, ಸಿಹಿಯಾಗಿರುತ್ತದೆ.

ಬೃಹತ್ ಮಟ್ಟದಲ್ಲಿ ಕೃಷಿ ಮಾಡುವಾಗ, ಕಲ್ಪ ಸಂಕರ ತಳಿಯಲ್ಲಿ ಸಮಗ್ರ ಸಸ್ಯ ಸಂರಕ್ಷಣಾ ಕ್ರಮಗಳ ಅಗತ್ಯತೆ ಬಹಳಷ್ಟಿರುತ್ತದೆ, ಅದರಲ್ಲೂ ಕೆಂಪು ಮೂತಿಯ ದುಂಬಿಯ ನಿಯಂತ್ರಣ ಮಾಡಲೇಬೇಕಾಗುತ್ತದೆ. ವಿವಿಧ ರೀತಿಯ ತೆಂಗಿನ ಸಂಕರಣ ತಳಿಗಳಲ್ಲಿ ನಡೆಸಿದ ಬರ ನಿರೋಧಕ ಅಧ್ಯಯನದಲ್ಲಿ ಕಂಡು ಬಂದಂತೆ ಕಲ್ಪ ಸಂಕರ ತಳಿಯು ನೀರಿನ ಕೊರತೆಯನ್ನು ಬಹುತೇಕ ಸಹಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆ. ಬೇರು (ಸೊರಗು) ರೋಗ ಭಾದಿತ ಮಳೆಯಾಧಾರಿತ ಪ್ರದೇಶಗಳಲ್ಲಿನ ರೈತರ ಜಮೀನುಗಳಲ್ಲಿ ಈ ಸಂಕರಣ ತಳಿಯು ಉತ್ತಮ ಇಳುವರಿ ನೀಡಿದೆ. ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಪ್ರಾಂತೀಯ ಕ್ಷೇತ್ರ ಕಾಯಂಕುಲಂನಲ್ಲಿನ ಬೇರು (ಸೊರಗು) ರೋಗ ಭಾದಿತ ಪ್ರಾಂತ್ಯದಲ್ಲಿ ಪ್ರಕಟಪಡಿಸಿದ ಉತ್ತಮ ಪ್ರದರ್ಶನದ ಸಲುವಾಗಿ, ಭಾ.ಕೃ.ಸಂ.ಪ.–

ಸಿ.ಪಿ.ಸಿ.ಆರ್.ಐ. ಬಿಡುಗಡೆಗೆಂದು ಮಂಡಿಸಿದ ಈ ತಳಿಯನ್ನು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯು 2009ರಲ್ಲಿ ನಡೆದ ತನ್ನ ಹತ್ತೊಂಬತ್ತನೆಯ ದ್ವಿವಾರ್ಷಿಕ ಕಾರ್ಯಗಾರದಲ್ಲಿ ದೇಶದಲ್ಲಿನ ಬೇರು (ಸೊರಗು) ರೋಗ ಬಾಧಿತ ಪ್ರಾಂತ್ಯಗಳಲ್ಲಿ ವಾಣಿಜ್ಯ ಕೃಷಿಗಾಗಿ ಶಿಫಾರಸು ಮಾಡಿದೆ. ಕೇಂದ್ರ ಬೆಳೆಗಳ ಗುಣಮಟ್ಟದ ಉಪಸಮಿತಿಯ ಅಧಿಸೂಚನೆ ಹಾಗು ಪ್ರಕಟಣೆಯಲ್ಲಿ ದೇಶದಲ್ಲಿನ ಬೇರು (ಸೊರಗು) ರೋಗ ಭಾದಿತ ಪ್ರಾಂತ್ಯಗಳಲ್ಲಿ ಬೆಳೆಯಲು ಕಲ್ಪ ಸಂಕರ ತಳಿಯನ್ನು ಬಿಡುಗಡೆಗೊಳಿಸಿ ಕೇಂದ್ರ ಕೃಷಿ ಸಚಿವಾಲಯ (ಕೃಷಿ ಮತ್ತು ಸಹಕಾರಿ ಇಲಾಖೆ)ವು ಅಧಿಸೂಚನೆ ನಂಬ್ರ ಎಸ್.ಒ. 456 (ಇ), ದಿನಾಂಕ 16 ಮಾರ್ಚ್, 2012ರಲ್ಲಿ ತಿಳಿಸಿದೆ.



**ಕಲ್ಪ ಸಂಕರ**

## 3.6. ಕಲ್ಪ ಶ್ರೇಷ್ಠ

ಕಲ್ಪ ಶ್ರೇಷ್ಠ ತಳಿಯು ಉತ್ತಮ ಇಳುವರಿ ನೀಡುವ ಕುಬ್ಜ x ಎತ್ತರ ಸಂಕರಣ ತಳಿಯಾಗಿದ್ದು, ಮಲಯನ್ ಹಳದಿ ಗಿಡ್ಡ ತಳಿ ಆಯ್ಕೆಯ ತಾಯಿ ಮರ ಹಾಗು ತಿಪಟೂರು ಎತ್ತರ ತಳಿ ಆಯ್ಕೆಯ ಪರಾಗ/ ಗಂಡು ಮರಗಳ ನಡುವಿನ ಸಂಕರಣ. ತಾಯಿ ಮರಗಳು ಗಿಡ್ಡವಾಗಿದ್ದು, ಹೂ ಬಿಡಲು ಸುಮಾರು 38 ತಿಂಗಳುಗಳನ್ನು ತೆಗೆದುಕೊಳ್ಳುತ್ತವೆ, ಕಡು ಹಳದಿ ಬಣ್ಣದ ಕಾಯಿಗಳನ್ನು ಬಿಡುತ್ತವೆ ಹಾಗು ಎಲೆಗಳ ದಂಟು ಹಳದಿ ಬಣ್ಣದ್ದಾಗಿರುತ್ತದೆ. ಗಂಡು ಮರಗಳು ಎತ್ತರವಿದ್ದು, ಹೂ ಬಿಡಲು ಸುಮಾರು 87 ತಿಂಗಳುಗಳನ್ನು ತೆಗೆದುಕೊಳ್ಳುತ್ತವೆ ಹಾಗು ಹಸಿರು ಬಣ್ಣದ ಕಾಯಿಗಳನ್ನು ಬಿಡುತ್ತವೆ. ಕಲ್ಪ ಶ್ರೇಷ್ಠ ಸಂಕರಣವನ್ನು ಎರಡೂ ಉದ್ದೇಶಕ್ಕಾಗಿ, ಅಂದರೆ ಎಳನೀರು ಮತ್ತು ಕೊಬ್ಬರಿ ಉತ್ಪಾದಿಸಲು ಬೆಳೆಯಬಹುದು. ಈ ತಳಿಯ ಮರಗಳು ಎತ್ತರವಾಗಿದ್ದು, ನಾಟಿ ಮಾಡಿದ 23 ವರ್ಷಗಳಲ್ಲಿ ಸರಾಸರಿ 10.05ಮೀ. ನಷ್ಟು ಎತ್ತರವಿರುತ್ತವೆ. ಈ ತಳಿಯ ತೆಂಗಿನ ಮರಗಳಲ್ಲಿ ಪ್ರಮುಖ ಬುಡವಿರುವುದಿಲ್ಲ. ಎಲೆಯ ದಂಟು ಹಸಿರು ಬಣ್ಣವನ್ನು ಹೊಂದಿರುತ್ತದೆ. ಎಳನೀರು ರುಚಿಕರವಾಗಿದ್ದು ಹೆಚ್ಚಿನ ಪ್ರಮಾಣದಲ್ಲಿರುವುದು, ಸಿಂಗಾರದಲ್ಲಿ ಹೆಚ್ಚಿನ ಹೆಣ್ಣು ಹೂಗಳಿರುವುದು, ಹಸಿರು ಬಣ್ಣದ ತೆಂಗಿನ

ಕಾಯಿಗಳು, ಹೆಚ್ಚಿನ ಹಣ್ಣಿನ ಇಳುವರಿ, ಹೆಚ್ಚಿನ ಹೊಂಬಾಳೆ ಉತ್ಪಾದನೆ, ಮರಗಳ ಉತ್ಕೃಷ್ಟ ಬೆಳವಣಿಗೆ ಕಲ್ಪ ಶ್ರೇಷ್ಠ ಸಂಕರಣ ತಳಿಯ ಪ್ರಮುಖ ಗುಣ ಲಕ್ಷಣಗಳಾಗಿವೆ. ಕಲ್ಪ ಶ್ರೇಷ್ಠ ತಳಿಯ ಮರಗಳು ಸದಾ ತೆಂಗಿನ ಕಾಯಿ ಕೊಡುವಂತಹವುಗಳಾಗಿದ್ದು, ನಾಟಿ ಮಾಡಿದ 6-7 ವರ್ಷಗಳಲ್ಲಿ ಹೂ ಬಿಡಲು ಆರಂಭಿಸುತ್ತವೆ. ಆದರೆ, ನೀರಾವರಿ ಪ್ರದೇಶಗಳಲ್ಲಿ ನಾಟಿ ಮಾಡಿದ 4 ವರ್ಷಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ ಎಂದು ನಿರೀಕ್ಷಿಸಲಾಗಿದೆ. ಈ ತಳಿಯು ನೀರಾವರಿ ಪ್ರದೇಶಗಳಲ್ಲಿ, ಪ್ರತೀ ಮರದಿಂದ ವಾರ್ಷಿಕ ಸರಾಸರಿ 167 ಕಾಯಿಗಳಂತೆ ಪ್ರತೀ ಹೆಕ್ಟೇರಿಗೆ 29227 ತೆಂಗಿನ ಕಾಯಿಗಳನ್ನು ಒದಗಿಸುತ್ತದೆ. ಪ್ರತೀ ಮರಕ್ಕೆ ವರ್ಷಕ್ಕೆ 35.9ಕಿ.ಗ್ರಾಂ ಕೊಬ್ಬರಿ ಇಳುವರಿಯನ್ನು ಕೊಡುತ್ತದೆಯೆಂದು ಅಂದಾಜು ಮಾಡಲಾಗಿದೆ (ಹೆಕ್ಟೇರಿಗೆ 6.28 ಟನ್ ಕೊಬ್ಬರಿ). ಕಲ್ಪ ಶ್ರೇಷ್ಠ ಸಂಕರಣ ತಳಿಯು ಈ ಹಿಂದೆ ಬಿಡುಗಡೆಗೊಳಿಸಿದ ಕುಬ್ಜ x ಎತ್ತರ ಸಂಕರಣ ತಳಿಯಾದ ಚಂದ್ರ ಸಂಕರ (ಚೌಘಾಟ್ ಕಿತ್ತಳೆ ಗಿಡ್ಡ x ಪಶ್ಚಿಮ ತೀರದ ಎತ್ತರ) ಸಂಕರಣಕ್ಕಿಂತ ಉತ್ತಮವಾಗಿದ್ದು, ವಾರ್ಷಿಕ ಅಂದಾಜು ಪ್ರತಿ ಹೆಕ್ಟೇರಿಗೆ ಕ್ರಮವಾಗಿ ಶೇ. 35.75ರಷ್ಟು ಕಾಯಿ ಮತ್ತು ಶೇ. 30.29ರಷ್ಟು ಕೊಬ್ಬರಿಯ ಹೆಚ್ಚಿನ ಇಳುವರಿ ನೀಡುತ್ತದೆ.

ಕರ್ನಾಟಕದ ಅರಸೀಕೆರೆ ಹಾಗು ಕೇರಳದ ಕಾಸರಗೋಡಿನ ಕ್ಷೇತ್ರಗಳಲ್ಲಿ ಯಾವುದೇ ಪ್ರಮುಖ ಕೀಟ ಬಾಧೆ ಹಾಗು ರೋಗದ ಲಕ್ಷಣಗಳು ಕಂಡುಬರಲಿಲ್ಲ. ಆದರೆ, ಕಲ್ಪ ಶ್ರೇಷ್ಠ ಸಂಕರಣ ತಳಿಯು '*ಲ್ಯಾಸಿಂಯೋಡಿಪ್ಲೋಡಿಯ ಥಿಯೋಬ್ರೋಮೇ*' ಯಿಂದ ಉಂಟಾಗುವ ಬೂದು ಎಲೆ ರೋಗ ಹಾಗು '*ಥೀಲವಿಯೋಪ್ಸಿಸ್ ಪ್ಯಾರಾಡಾಕ್ಸಾ*' ದಿಂದ ಉಂಟಾಗುವ ತೆಂಗಿನ ಕಾಂಡ ಸೋರುವ ರೋಗಗಳಿಗೆ ಶೇ. 11ರಷ್ಟು ತುತ್ತಾಗಿದ್ದು, ಈ ರೋಗಗಳಿಗೆ ಸಾಧಾರಣವಾಗಿ ತುತ್ತಾಗುತ್ತಿದೆಯೆಂದು ವರ್ಗೀಕರಿಸಲಾಗಿದೆ.

ಕಲ್ಪ ಶ್ರೇಷ್ಠ ಸಂಕರಣ ತಳಿಯಲ್ಲಿ ಎಳನೀರಿನ ಪ್ರಮಾಣ ಅಂದಾಜು 368ಮಿ.ಲೀ. ನಷ್ಟಿದ್ದು ಇಂದ್ರಿಯಗಳ ಮೇಲಿನ ಪರಿಣಾಮ ಉಂಟು ಮಾಡುವ ಆಧಾರದ ಮೇಲೆ ನಡೆದ ಮೌಲ್ಯಮಾಪನದ ಪ್ರಕಾರ (ಆರ್ಗ್ಯಾನೋಲೆಪ್ಟಿಕ್) ಈ ಎಳನೀರನ್ನು ರುಚಿಯಲ್ಲಿ 'ಉತ್ತಮ' ವೆಂದು ವರ್ಗೀಕರಿಸಲಾಗಿದ್ದು ಟಿಎಸ್ಎಸ್ 5.89°ಬ್ರಿಕ್ಸ್ ಇರುತ್ತದೆ. 100ಮಿ.ಲೀ. ಎಳನೀರಿನಲ್ಲಿ 5.81ಗ್ರಾಂ ಒಟ್ಟು ಸಕ್ಕರೆ, 1.34ಮಿ.ಗ್ರಾಂ ಅಮೀನೋ ಆಮ್ಲ, 33.3ಪಿಪಿಎಮ್ ಸೋಡಿಯಂ ಹಾಗು 2081ಪಿಪಿಎಮ್ ಪೊಟಾಷಿಯಂ ಇರುತ್ತದೆ. ಈ ತಳಿಯ ಸಿಪ್ಪೆ ಸಹಿತ ಕಾಯಿಯ ಸರಾಸರಿ ತೂಕ 940.09ಗ್ರಾಂ. ನಷ್ಟಿದ್ದು, ಸಿಪ್ಪೆ ತೆಗೆದ ಕಾಯಿಯ ಸರಾಸರಿ ತೂಕ 610ಗ್ರಾಂ. ನಷ್ಟಿರುತ್ತದೆ. ಸರಾಸರಿ ಕೊಬ್ಬರಿ ಅಂಶವು ಸುಮಾರು 215ಗ್ರಾಂ. ನಷ್ಟಿದ್ದು, ಕೊಬ್ಬರಿ ಎಣ್ಣೆ ಅಂಶ ಶೇ. 64.1ರಷ್ಟಿರುತ್ತದೆ.

ಭಾ.ಕೃ.ಸಂ.ಪ.–ಸಿ.ಪಿ.ಸಿ.ಆರ್.ಐ., ಕಾಸರಗೋಡು ಹಾಗು ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಕೇಂದ್ರವಾದ ಕರ್ನಾಟಕದ ಅರಸೀಕೆರೆಯ ನೀರಾವರಿ ಪ್ರದೇಶಗಳಲ್ಲಿ ಕಲ್ಪ

ಶ್ರೇಷ್ಠ ಸಂಕರಣ ತಳಿಯು ಉತ್ತಮ ಇಳುವರಿಯನ್ನು ನೀಡಿದ್ದರಿಂದ ಕೇರಳ ಹಾಗು ಕರ್ನಾಟಕದ ತೆಂಗು ಬೆಳೆಯುವ ಪ್ರದೇಶಗಳಿಗಾಗಿ ಜುಲೈ 2014ರಲ್ಲಿ ನಡೆದ ಅಖಿಲ ಭಾರತ ಸಂಘಟಿತ ಪಾಮ್ಸ್ ಸಂಶೋಧನಾ ಯೋಜನೆಯ ಇಪ್ಪತ್ಮೂರನೆಯ ಕಾರ್ಯಗಾರದಲ್ಲಿ ಶಿಫಾರಸು ಮಾಡಲಾಗಿದೆ.



**ಕಲ್ಪ ಶ್ರೇಷ್ಠ**

## ಉತ್ತಮ ಗುಣಮಟ್ಟದ ಬೀಜ/ ಸಸಿಗಳ ಉತ್ಪಾದನೆ :

### ಬೀಜದ ಕಾಯಿ ತೋಟಗಳ ಸ್ಥಾಪನೆ :

ರೈತರಿಗೆ ಉತ್ತಮ ಗುಣಮಟ್ಟದ ತೆಂಗಿನ ಬೀಜ/ ಸಸಿಗಳನ್ನು ಪೂರೈಸಲು ದೇಶದೆಲ್ಲೆಡೆ ತೆಂಗು ಬೆಳೆಯುವ ಪ್ರದೇಶಗಳಲ್ಲಿ ಬೀಜ ತೋಟಗಳ ಸ್ಥಾಪನೆ ಅತ್ಯಗತ್ಯವಾಗಿದೆ. ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ಸಾರ್ವಜನಿಕ ಹಾಗೂ ಖಾಸಗಿ ವಲಯದಲ್ಲಿ ಬೀಜದ ತೋಟಗಳ ಸ್ಥಾಪನೆಯನ್ನು ಉತ್ತೇಜಿಸುತ್ತದೆ. ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ತನ್ನ ಸಂಶೋಧನಾ ಸಂಸ್ಥೆಯಲ್ಲಿ ಅಭಿವೃದ್ಧಿಪಡಿಸಿದ ತಳಿಗಳನ್ನು ಪರವಾನಗಿ ಮೂಲಕ ವಾಣಿಜ್ಯಾಕರಣಕ್ಕಾಗಿ ವಿವಿಧ ವಿಧಾನಗಳನ್ನು ರೂಪಿಸಿರುವುದಲ್ಲದೇ ಬೀಜದ ತೋಟಗಳ ಸ್ಥಾಪನೆಗೆ ತಾಂತ್ರಿಕ ಮಾರ್ಗದರ್ಶನವನ್ನು ನೀಡುವುದರ ಜೊತೆಗೆ ಗುಣಮಟ್ಟದ ತಳಿಗಳ ಮೂಲ ಸಸಿ/ಬೀಜದ ಕಾಯಿಗಳನ್ನೂ ಒದಗಿಸುತ್ತಿದೆ. ಉತ್ತಮ ಗುಣಮಟ್ಟದ ಸಂಕರಣ ಬೀಜ/ಸಸಿಗಳನ್ನು ಉತ್ಪಾದಿಸಲು ಸಂಕರಣ ತಳಿಗಳ ಬೀಜದ ತೋಟವು ಗಂಡು ಮತ್ತು ಹೆಣ್ಣು ಮರಗಳನ್ನು ಹೊಂದಿರಬೇಕು. ಅಲ್ಲದೇ, ಕೃಷಿಕರು/ನರ್ಸರಿ ಮಾಲಿಕರು ಉತ್ತಮ ಗುಣಮಟ್ಟದ ಬೀಜ/ಸಸಿಗಳನ್ನು ಮಾರಾಟ ಮಾಡುವುದಾದಲ್ಲಿ ಬೀಜ ಮತ್ತು ಸಸಿಗಳ ಮಾನದಂಡಗಳನ್ನು ಅನುಸರಿಸಬೇಕು.

### ಉನ್ನತ ಗುಣಮಟ್ಟದ ಬೀಜ/ಸಸಿಗಳ ಉತ್ಪಾದನೆಯಲ್ಲಿ ಅನುಸರಿಸಬೇಕಾದ ಮಾನದಂಡಗಳು:

ತೆಂಗು ಬೆಳೆಗಾರರಿಗೆ ಬೀಜ/ಸಸಿಗಳನ್ನು ಒದಗಿಸುವ ಬೇರೆ ಬೇರೆ ಪೂರೈಕೆದಾರರು ಇದ್ದಾರೆ. ಇಂತಹ ಪೂರೈಕೆದಾರರಿಂದ ಒದಗಿಸಲ್ಪಡುವ ಬೀಜ/ಸಸಿಗಳ ಗುಣಮಟ್ಟವನ್ನು ಕಾಯುವುದಕ್ಕಾಗಿ

ಭಾರತೀಯ ಕೃಷಿ ಸಂಶೋಧನಾ ಪರಿಷತ್ತು (ಭಾ.ಕೃ.ಸಂ.ಪ.) ಬೃಹತ್ ಚಟುವಟಿಕೆಗಳನ್ನು ಕೈಗೊಂಡಿದ್ದು, ತೋಟಗಾರಿಕಾ ಬೆಳೆಗಳ ಬೀಜ/ಸಸಿಗಳನ್ನು ಪೂರೈಕೆಗೆ ಕೆಲವೊಂದು ಕನಿಷ್ಟ ಮಾನದಂಡಗಳನ್ನು ನಿರ್ದಿಷ್ಟಪಡಿಸಿದೆ. ಇದಕ್ಕನುಗುಣವಾಗಿ ತೆಂಗಿನ ಬೀಜ/ಸಸಿಗಳ ಪೂರೈಕೆಗೆ ಅಗತ್ಯವಾದ ಮಾನದಂಡಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

**ತೆಂಗಿನ ಬೀಜಕ್ಕೆ ಅಗತ್ಯವಾದ ಕನಿಷ್ಟ ಮಾನದಂಡಗಳು**

| **ನಿಯತಾಂಕಗಳು** | **ಮಾನದಂಡಗಳು** |
|---|---|
| ಮೊಳಕೆಯೊಡೆಯುವಿಕೆ | > 80 % |
| ಶುದ್ಧತೆ | > 98 % |
| ಬೆಳೆದ ಕಾಯಿಯ ತೂಕ (ಗ್ರಾಂ) | > 400 ಗ್ರಾಂ : ಕುಬ್ಜ<br>> 600 ಗ್ರಾಂ : ಎತ್ತರ |
| ಕಾಯಿಯ ನೀರು | ಇರಬೇಕು |
| ಆರೋಗ್ಯ | ಕೀಟ ಮತ್ತು ರೋಗ ಮುಕ್ತವಾಗಿರಬೇಕು |

**ತೆಂಗಿನ ಸಸಿಗಳಿಗೆ ಅಗತ್ಯವಾದ ಕನಿಷ್ಟ ಮಾನದಂಡಗಳು**

| **ನಿಯತಾಂಕಗಳು** | **ಮಾನದಂಡಗಳು** |
|---|---|
| ಸಸಿಯ ವಯಸ್ಸು | 12 ತಿಂಗಳು |
| ಎಲೆಗಳ ಸಂಖ್ಯೆ | 6 ಮತ್ತು ಅದಕ್ಕಿಂತ ಹೆಚ್ಚು |
| ಕೊರಳು ಭಾಗದಲ್ಲಿ ಸುತ್ತಳತೆ/ ದಪ್ಪ | ಕುಬ್ಜ : >8 ಸೆಂ. ಮೀ.<br>ಎತ್ತರ/ ಸಂಕರ : >10 ಸೆಂ. ಮೀ. |
| ಎತ್ತರ | ಕುಬ್ಜ : >80 ಸೆಂ. ಮೀ.<br>ಎತ್ತರ/ ಸಂಕರ : >100 ಸೆಂ. ಮೀ. |
| ಎಲೆ ತೊಟ್ಟಿನ ಬಣ್ಣ | ಕುಬ್ಜ ತಳಿಯು ತನ್ನ ತಾಯಿ ಮರದ ಬಣ್ಣವನ್ನು ಹೊಂದಿರಬೇಕು<br>ಸಂಕರಣ ತಳಿಯು ತನ್ನ ತಂದೆ–ತಾಯಿ/ಪೋಷಕರ ಮಧ್ಯಂತರ ಬಣ್ಣವನ್ನು ಹೊಂದಿರಬೇಕು |
| ಆರೋಗ್ಯ | ಕೀಟ ಮತ್ತು ರೋಗ ಮುಕ್ತವಾಗಿರಬೇಕು |

ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯು ಬಿಡುಗಡೆಗೊಳಿಸಿದ ವಿವಿಧ ತಳಿಗಳು ಹಾಗೂ ಸಂಕರಣ ತಳಿಗಳ ಸಸಿ/ಬೀಜಗಳನ್ನು ರೈತರಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ಅಭಿವೃದ್ಧಿ ಸಂಸ್ಥೆಗಳಿಗೆ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಒದಗಿಸುತ್ತಿದೆ. ಬೀಜದ ಕಾಯಿಗಳನ್ನು

ವರ್ಷಪೂರ್ತಿ ಮತ್ತು ಸಸಿಗಳನ್ನು ಜೂನ್ ತಿಂಗಳಿನಿಂದ ಇವುಗಳ ಲಭ್ಯತೆ ಆಧಾರದ ಮೇಲೆ ವಿತರಿಸಲಾಗುತ್ತಿದೆ. ಸುಧಾರಿತ ತಳಿಗಳ ಗುಣಮಟ್ಟದ ಸಸಿಗಳು ಹಾಗೂ ಬೀಜಗಳನ್ನು ಉತ್ಪಾದಿಸಲು ಸಂಸ್ಥೆಯು ಬೆಳೆಗಾರರೊಂದಿಗೆ/ನರ್ಸರಿಗಳೊಂದಿಗೆ/ಬೀಜ ಕಂಪನಿಗಳೊಂದಿಗೆ ಸಂಪರ್ಕ ಹೊಂದಲು ಎದುರು ನೋಡುತ್ತಿದೆ.

**ಬೀಜ/ಸಸಿಗಳಿಗಾಗಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ :**


**ನಿರ್ದೇಶಕರು**

**ಭಾ.ಕೃ.ಸಂ.ಪ.–ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ**

**ಕಾಸರಗೋಡು –** 671 124, **ಕೇರಳ**

**ದೂರವಾಣಿ:** 04994-232893/94/95, 232090

**ಫ್ಯಾಕ್ಸ್ :** 04994-232322

**ಇ ಮೈಲ್ :** director.cpcri@icar.gov.in, directorcpcri@gmail.com

**ಜಾಲತಾಣ :** http://www.cpcri.gov.in